ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಜನವರಿ 07, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 235 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



## ಜ.20ರಿಂದ 'ಆಫ್ ಅಂಡ್ ಆನ್' ಪದ್ಧತಿಯಲ್ಲಿ ಭದ್ರಾ ನಾಲೆಗೆ ನೀರು

ಶಿವಮೊಗ್ಗ, ಜ. 6 - ಭದ್ರಾ ಅಚ್ಚುಕಟ್ಟಿನ ಬೇಸಿಗೆ ಹಂಗಾಮಿನ ಬೆಳೆಗಳಿಗೆ (ತೋಟದ ಬೆಳೆಗಳಿಗೆ) ಭದ್ರಾ ಜಲಾಶಯದಿಂದ ಬಲದಂಡೆ ಕಾಲುವೆಗೆ ಜನವರಿ 20 ರಿಂದ ನೀರು ಹರಿಸಲು ಭದ್ರಾ ಕಾಡಾ ಸಭೆ ತೀರ್ಮಾನಿಸಿತು.

ಶನಿವಾರ ಮಲವಗೊಪ್ಪದಲ್ಲಿರುವ ಭದ್ರಾ ಕಾಡಾ ಕಛೇರಿಯಲ್ಲಿ ಭದ್ರಾ ಕಾಡಾ ಅಧ್ಯಕ್ಷರೂ ಆದ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆಯಲ್ಲಿ ಸುದೀರ್ಘ ಚರ್ಚೆಯ ನಂತರ ಎಡ ಮತ್ತು ಬಲದಂಡೆ ನಾಲೆಗಳಿಗೆ ನೀರು ಹರಿಸುವ ವೇಳಾಪಟ್ಟಿ ಪ್ರಕಟಿಸಲಾಯಿತು. ಬಲದಂಡೆ ನಾಲೆಗೆ ಜನವರಿ 20 ರಿಂದ 12 ದಿವಸ ನೀರು ಹರಿಸಿದ ನಂತರ 20 ದಿನ ಬಂದ್ ಮಾಡಲಾಗುವುದು.

| ಬಲದಂಡೆ ವೇಳಾಪಟ್ಟಿ |
|---|
| ನೀರು ಹರಿಸುವುದು(12ದಿನ) 20-01-24 ರಿಂದ 1-02-24 |
| ನೀರು ನಿಲ್ಲಿಸುವುದು(20ದಿನ) 2-02-24 ರಿಂದ 22-2-24 |
| ನೀರು ಹರಿಸುವುದು(13ದಿನ) 23-02-24 ರಿಂದ 6-03-24 |
| ನೀರು ನಿಲ್ಲಿಸುವುದು(20ದಿನ) 7-03-24 ರಿಂದ 26-03-24 |
| ನೀರು ಹರಿಸುವುದು(14ದಿನ) 27-03-24 ರಿಂದ 10-04-24 |
| ನೀರು ನಿಲ್ಲಿಸುವುದು(20ದಿನ) 11-04-24 ರಿಂದ 30-04-24 |
| ನೀರು ಹರಿಸುವುದು(14ದಿನ) 1-05-24 ರಿಂದ 14-05-24 |

ಮಾಹಿತಿ ನೀಡಿ, 71,535 ಟಿಎಂಸಿ ನೀರು ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 35,370 ಟಿಎಂಸಿ ನೀರು ಲಭ್ಯವಿದೆ.

ಇದರಲ್ಲಿ 13.83 ಟಿಎಂಸಿ ಡೆಡ್ ಸ್ಟೋರೇಜ್ ಇರುತ್ತದೆ. ಈ ನೀರು ಬಳಕೆಗೆ ಬರುವುದಿಲ್ಲ. ಉಳಿದ 21.54 ಟಿಎಂಸಿ ನೀರಿನಲ್ಲಿ ಕೈಗಾರಿಕೆ ಉದ್ದೇಶಗಳಿಗೆ 6.90 ಟಿಎಂಸಿ ನೀರು ಮೀಸಲಿಡಬೇಕು. ಜನವರಿಯಿಂದ ಮೇ ತಿಂಗಳವರೆಗೆ 1.91 ಟಿಎಂಸಿ ನೀರು ಆವಿಯಾಗಲಿದ್ದು, ಭದ್ರಾ ಮೇಲ್ದಂಡೆ ಯೋಜನೆಯ ಕಾಲುವೆಗೆ - 0.11 ನೀರು ಹರಿಸಲಾಗುವುದು. ಉಳಿದ 12.62 ಟಿಎಂಸಿ ನೀರನ್ನು ಭದ್ರಾ ಬಲದಂಡೆ ಮತ್ತು ಎಡದಂಡೆ ನಾಲೆಗಳಿಗೆ 47 ದಿನಗಳವರೆಗೆ ಹರಿಸಬಹುದೆಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಮತ್ತೆ 13 ದಿನ ನೀರು ಹರಿಸಿ, 20 ದಿನ ಬಂದ್ ಮಾಡುವುದು, ಪುನಃ 14 ದಿನ ನೀರು ಹರಿಸಿ, 20 ದಿನ ಬಂದ್ ಮಾಡಿ ಕೊನೆಯಲ್ಲಿ ಮತ್ತೆ 14 ದಿನ ನೀರು ಹರಿಸಲಾಗುವುದು.

ಜನವರಿಯಿಂದ ಮೇ ತಿಂಗಳವರೆಗೆ ಒಟ್ಟು 53 ದಿನ ನೀರು ಹರಿಸಿ 60 ದಿನ ಬಂದ್ ಮಾಡಲಾಗುವುದು.

ಸಭೆಯ ಆರಂಭದಲ್ಲಿ ಭದ್ರಾ ಅಧೀಕ್ಷಕ ಇಂಜಿನಿಯರ್ ಸುಜಾತ ಅವರು ಜಲಾಶಯದ ಸದ್ಯದ ಪರಿಸ್ಥಿತಿ ಬಗ್ಗೆ

ನಂತರ ಸಚಿವರು, ಶಾಸಕರು, ರೈತ ಮುಖಂಡರು, ಅಧಿಕಾರಿಗಳು ಚರ್ಚೆ ನಡೆಸಿ, ಅಂತಿಮವಾಗಿ ಲಭ್ಯವಿರುವ ನೀರನ್ನು 'ಆನ್ ಅಂಡ್ ಆಫ್' ವ್ಯವಸ್ಥೆಯಲ್ಲಿ ಜನವರಿಯಿಂದ ಮೇ 6 ರ ವರೆಗೆ ಎಡದಂಡೆ ಮತ್ತು ಬಲದಂಡೆ ನಾಲೆಗಳಿಗೆ ನೀರು ಹರಿಸಿ, ತೋಟದ ಬೆಳೆಗಳನ್ನು ರಕ್ಷಿಸಲು ಸಭೆ ತೀರ್ಮಾನಿಸಿತು.

ಸಭೆಯಲ್ಲಿ ರೈತ ಮುಖಂಡ ತೇಜಸ್ವಿ ಪಟೇಲ್ ಮಾತನಾಡಿ, ಫೆಬ್ರವರಿಯಿಂದ ಮೇ (3ನೇ ಪುಟಕ್ಕೆ)

## ಪ್ರತಿ 15 ನಿಮಿಷಕ್ಕೊಂದು ಅತ್ಯಾಚಾರ

### ಆಧುನಿಕ ಬಂಡವಾಳ ಶಾಹಿ ವ್ಯವಸ್ಥೆ ಮಹಿಳೆಯನ್ನು ಲೈಂಗಿಕ ಸರಕಾಗಿಸಿದೆ : ರೂಪ ಹಾಸನ್

ದಾವಣಗೆರೆ, ಜ. 6- ಆಧುನಿಕ ಬಂಡವಾಳಶಾಹಿ ವ್ಯವಸ್ಥೆ ಮಹಿಳೆಯನ್ನು ಲೈಂಗಿಕ ಸರಕನ್ನಾಗಿ ಮಾಡಿದೆ ಎಂದು ಲೇಖಕಿ, ಸಾಮಾಜಿಕ ಕಾರ್ಯಕರ್ತೆ ರೂಪ ಹಾಸನ್ ಹೇಳಿದರು.

ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಎಐಎಂಎಸ್‌ಎಸ್ ವತಿಯಿಂದ ಏಳನೇ ರಾಜ್ಯ ಸಮ್ಮೇಳನದ ಅಂಗವಾಗಿ ಹಮ್ಮಿಕೊಂಡಿದ್ದ ಬಹಿರಂಗ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳಾ ಸಮುದಾಯದ ಮೇಲಿನ ದೌರ್ಜನ್ಯ ಅಗಾಧವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ಮಾಡುವಂತಾಗಿದೆ. ಇಂದು ಎಲ್ಲಾ ಹಂತಗಳಲ್ಲೂ ರಾಜಕೀಕರಣ ಅನಿವಾರ್ಯವಾಗಿದೆ. ಇಂದಿಗೂ ಕೂಡ ಕೆಲವೇ ಕ್ಷೇತ್ರಗಳಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರಿದ್ದಾರೆ. 15 ನಿಮಿಷಕ್ಕೊಂದು ಅತ್ಯಾಚಾರ, ಪ್ರತಿ ಎರಡು ನಿಮಿಷಕ್ಕೊಂದು ವಿವಿಧ ರೀತಿಯ ಶೋಷಣೆಗಳಿಗೆ ಮಹಿಳೆ ಬಲಿಯಾಗುತ್ತಿದ್ದಾಳೆ. ಹೀಗೆ ಮುಂದುವರೆದರೆ ಹೆಣ್ಣು ಸಂಕುಲ ಅವನತಿಯತ್ತ ಸಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಎಲ್ಲಾ ಸ್ತರದ ಮಹಿಳೆಯರು ಒಂದಲ್ಲಾ ಒಂದು ಕ್ರೂರತೆಗೆ ತುತ್ತಾಗುತ್ತಿದ್ದಾರೆ. ಆಧುನಿಕ ಬಂಡವಾಳ ಶಾಹಿ ವ್ಯವಸ್ಥೆ ಮಹಿಳೆಯನ್ನು ಲೈಂಗಿಕ ಸರಕನ್ನಾಗಿ ಪರಿಗಣಿಸುತ್ತಿರುವುದು ದುರ್ದೈವದ ಸಂಗತಿ ಎಂದರು.

ಎಐಎಂಎಸ್‌ಎಸ್ ದಶಕಗಳಿಂದ ಸಂಘಟನೆಯತ್ತ ಆದ್ಯತೆ ನೀಡುತ್ತಾ ಬಂದಿದ್ದು, ಪ್ರಸ್ತುತ ದೇಶ ಆತಂಕಕಾರಿ ಪರಿಸ್ಥಿತಿಗೆ ಬಂದು ತಲುಪಿದೆ. ನೈತಿಕವಾಗಿ ಹಿಮ್ಮುಖವಾಗಿ




**ಎಐಎಂಎಸ್‌ಎಸ್ ಏಳನೇ ರಾಜ್ಯ ಸಮ್ಮೇಳನದ ಬಹಿರಂಗ ಅಧಿವೇಶನ**

ಹೆಸರಿಗೆ ಪ್ರಜಾತಂತ್ರ, ಆದರೆ ಪ್ರಜಾತಾಂತ್ರಿಕ ಮೌಲ್ಯಗಳೇ ಅಸ್ತಿತ್ವದಲ್ಲಿ ಇಲ್ಲ. ಮತೀಯ ಸಂಘರ್ಷ, ಬಂಡವಾಳ ಶಾಹಿಯ ಕಪಿಮುಷ್ಠಿ, ಮಹಿಳಾ ಸಮುದಾಯದ ಮೇಲಿನ ದೌರ್ಜನ್ಯ ಅಗಾಧವಾದುದು ಎಂದು ಹೇಳಿದರು.

ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ ಮಾತನಾಡಿ, ಹೆಣ್ಣಿಗೆ ಧೈರ್ಯ ಇಲ್ಲ ಎಂದಲ್ಲ, ಸಮಾಜ ಹೆಣ್ಣು ಮಕ್ಕಳನ್ನು ಧೈರ್ಯದಿಂದ ಇರಲು ಬಿಟ್ಟಿಲ್ಲ ಎಂದರು.

ಸಾವಿತ್ರಿ ಬಾಪುಲೆ, ಜ್ಯೋತಿ ಬಾಪುಲೆ, ವಿದ್ಯಾಸಾಗರ್, ಕುದ್ಮಲ್ ರಂಗರಾವ್ ಮುಂತಾದವರು ಮಹಿಳೆಯರ ಏಳಿಗೆಗೆ ಶ್ರಮಿಸಿದ್ದಾರೆ. ಇದುವರೆಗೂ ಆಳಿದ ಎಲ್ಲಾ ಪಕ್ಷಗಳು ಮಹಿಳೆಯರ ರಕ್ಷಣೆಗಾಗಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರೀತಿಲತಾ ವಡ್ಡೋದರ, ಮಾತಾಂಗಿನಿ ಹಾಝ್ರಾ ಮೊದಲಾದವರು ಶೌರ್ಯ ನಮ್ಮ ಕಣ್ಮುಂದಿದೆ. ಇಲ್ಲಿ ಈ ಸಮಸ್ಯೆಗೆ ಮೂಲ ಕಾರಣ ನಮ್ಮ ಸ್ವಾತಂತ್ರ್ಯ ಚಳವಳಿಯ ವೈಫಲ್ಯದಲ್ಲಿದೆ. ಪ್ರಜಾತಾಂತ್ರಿಕರಣಗೊಂಡಿಲ್ಲ. ಆದ್ದರಿಂದ ಇಂದಿಗೂ ಅನ್ಯಾಯಕ್ಕೆ ಒಳಗಾದ ಮಹಿಳೆಯನ್ನೇ ಅಪವಾದಕ್ಕೆ ಗುರಿ ಮಾಡಲಾಗುತ್ತಿದೆ ಎಂದರು.

ಮಹಿಳೆ ಸಂಪ್ರದಾಯ, ಮೌಢ್ಯಗಳ ಚೌಕಟ್ಟಿನಲ್ಲಿ ಬಂಧಿಯಾಗಿದ್ದಾಳೆ. ಐತಿಹಾಸಿಕವಾಗಿ (4ನೇ ಪುಟಕ್ಕೆ)

## ಧೂಮಪಾನ ನಿಷೇಧಿತ ಪ್ರದೇಶ ನಾಮಫಲಕ ಕಡ್ಡಾಯ

**ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಗೆ ಎಸ್ಪಿ ಉಮಾ ಪ್ರಶಾಂತ್ ನಿರ್ದೇಶನ**

ದಾವಣಗೆರೆ. ಜ. 6- ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಧೂಮಪಾನ ನಿಷೇಧಿತ ಪ್ರದೇಶ ಎಂಬ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸುವಂತೆ ಎಲ್ಲಾ ಠಾಣೆಗಳ ಪೊಲೀಸ್ ಅಧಿಕಾರಿಗಳಿಗೆ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಸೂಚಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಗರ ವ್ಯಾಪ್ತಿಯಲ್ಲಿ ತಂಬಾಕು ಮಾರಾಟಕ್ಕೆ ಪರವಾನಗಿ ಕುರಿತು ಇಂದು ಏರ್ಪಾಡಾಗಿದ್ದ ಪೊಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವರ್ಷದ ಆರಂಭಿಕವಾಗಿ ತರಬೇತಿ



ಆಯೋ ಜಿಸಿದ್ದು, ಕಳೆದ ವರ್ಷಕ್ಕಿಂತ ಪ್ರಸ್ತುತ ವರ್ಷದಲ್ಲಿ ಹೆಚ್ಚು ಪ್ರಕರಣಗಳನ್ನು ದಾಖಲಿಸಿ, ಸಾರ್ವಜನಿಕರು ಕಂಡ-ಕಂಡಲ್ಲಿ ಧೂಮಪಾನ ಮಾಡದಂತೆ ಸೂಕ್ತ ಕ್ರಮ ವಹಿಸಿ ದಂಡ ವಿಧಿಸಿ ಕೋಟ್ಪಾ ಕಾಯ್ದೆ ಪರಿಣಾಮಕಾರಿ ಅನುಷ್ಠಾನಕ್ಕೆ ಈ ತರಬೇತಿ ಮುನ್ನುಡಿಯಾಗಬೇಕು ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ ರಾಘವನ್ ಪ್ರಾಸ್ತಾವಿಕವಾಗಿ ಮಾತನಾಡಿ, ತಂಬಾಕು ಬಳಸುವವರ ಸಂಖ್ಯೆಯಲ್ಲಿ ಭಾರತ ಪ್ರಪಂಚದಲ್ಲಿಯೇ 2 ನೇ ರಾಷ್ಟ್ರವಾಗಿದ್ದು, ಅದರಲ್ಲಿ ಶೇ.28.6 ರಷ್ಟು ತಂಬಾಕು ಬಳಕೆದಾರರಿದ್ದು ಪುರುಷರು ಶೇ.42.4 ಮಹಿಳೆಯರು ಶೇ 14.2 ರಷ್ಟು ಬಳಕೆ ಮಾಡುತ್ತಿದ್ದು ಭಾರತದಾದ್ಯಂತ ಪ್ರತಿ ವರ್ಷ 15 ಲಕ್ಷ ಜನ ಸಾವನ್ನಪ್ಪುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ತಂಬಾಕು ಉತ್ಪನ್ನ ಮಾರಾಟಗಾರರಿಗೆ ಪರವಾನಗಿ ನೀತಿಯನ್ನು ಜಾರಿಗೊಳಿಸಿ, ಎಲ್ಲೆಂದರಲ್ಲಿ ತಂಬಾಕು ಮಾರಾಟ ಆಗದಂತೆ ಕಟ್ಟುನಿಟ್ಟಾಗಿ ಕೋಟ್ಪಾ ಕಾಯ್ದೆಯನ್ನು ಅನುಷ್ಠಾನಗೊಳಿಸಿ ಮಕ್ಕಳಿಗೆ ತಂಬಾಕು ಉತ್ಪನ್ನಗಳು ಸಿಗದಂತೆ ನಿಯಂತ್ರಿಸಿ, ಯುವಕರು ತಂಬಾಕಿಗೆ (4ನೇ ಪುಟಕ್ಕೆ)

## ಆರೋಗ್ಯಕ್ಕಾಗಿ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಕರೆ



ದಾವಣಗೆರೆ, ಜ.6- ಮಹಿಳೆಯರು ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ಆರೋಗ್ಯವನ್ನು ಉತ್ತಮ ರೀತಿಯಲ್ಲಿಡಲು ಸಹಕಾರಿಯಾಗಲಿ ಎಂದು ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ವತಿಯಿಂದ ದಾವಣಗೆರೆ ನಗರದ ಲೂರ್ಡ್ಸ್ ಬಾಯ್ಸ್ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ಹೊನಲು ಬೆಳಕಿನ ಮಹಿಳಾ ಪುಟ್ಬಾಲ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮಹಿಳೆಯರು ಕ್ರೀಡಾಕೂಟಗಳಲ್ಲಿ ಭಾಗವಹಿಸುವುದೇ ಕಡಿಮೆ. ಇದು ಮುಂದುವರೆಯಬಾರದು. ಮಹಿಳೆಯರು

**ರಾಜ್ಯಮಟ್ಟದ ಹೊನಲು ಬೆಳಕಿನ ಮಹಿಳಾ ಪುಟ್ಬಾಲ್ ಪಂದ್ಯಾವಳಿಗೆ ಚಾಲನೆ ನೀಡಿದ ಡಾ.ಪ್ರಭಾ ಮಲ್ಲಿಕಾರ್ಜುನ್**

ಹೆಚ್ಚೆಚ್ಚು ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಮೂಲಕ ಆರೋಗ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಉದಾಹರಣೆ ಸಮೇತ ವಿವರಿಸಿದರು.

ಉಪವಿಭಾಗಾಧಿಕಾರಿ ದುರ್ಗಾಶ್ರೀ (3ನೇ ಪುಟಕ್ಕೆ)

## ಯುವನಿಧಿ ಸಹಾಯವಾಣಿ ಕೇಂದ್ರ ಆರಂಭ

ದಾವಣಗೆರೆ, ಜ. 6 - ಜಿಲ್ಲಾಡಳಿತದ ವತಿಯಿಂದ ಸರ್ಕಾರದ5ನೇ ಗ್ಯಾರಂಟಿ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ ತೊಂದರೆಗಳನ್ನು ನಿವಾರಿಸಲು ಮಹಾನಗರ ಪಾಲಿಕೆಯಲ್ಲಿ ಆವರಣದಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಅರ್ಜಿಯನ್ನು ನೋಂದಾಯಿಸಿಕೊಳ್ಳಲು ಸೇವಾ ಸಿಂಧು ಪೋರ್ಟಲ್ HYPER-LINK "https://

(3ನೇ ಪುಟಕ್ಕೆ)

## ಕಾಂತರಾಜ್ ವರದಿ ಅನುಷ್ಠಾನಕ್ಕೆ ಸಿಎಂಗೆ ಮಠಾಧೀಶರ ಮನವಿ



ಬೆಂಗಳೂರು ಜ. 6 - ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ನಿಯೋಗದಲ್ಲಿ ನಾಡಿನ ವಿವಿಧ ಮಠಗಳ ಮಠಾಧೀಶರರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಆಯ ಸಮುದಾಯಗಳ ಸಮಸ್ಯೆಗಳ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ ಕಾಂತರಾಜ್ ವರದಿಯನ್ನು ಒಪ್ಪಿಕೊಂಡು ಅನುಷ್ಠಾನ ಗೊಳಿಸುವಂತೆಯೂ ಮನವಿ ಮಾಡಿದರು.

## ಪ್ರತಿಭಟನೆ ಬಿಡಿ, ಕರ್ತವ್ಯಕ್ಕೆ ಹಾಜರಾಗಿ : ಸಿಎಂ ಮನವಿ

**ಅತಿಥಿ ಉಪನ್ಯಾಸಕರ ಸೇವಾನುಭವದ ಆಧಾರದ ಮೇಲೆ ಗೌರವ ಧನ 8 ಸಾವಿರ ರೂ.ಗೆ ಹೆಚ್ಚಳ ಮಾಡಿದ ರಾಜ್ಯ ಸರ್ಕಾರ**

ಬೆಂಗಳೂರು,ಜ. 6- ಅತಿಥಿ ಉಪನ್ಯಾಸಕರಿಗೆ ಸೇವಾನುಭವ ಆಧಾರದ ಮೇಲೆ ಗೌರವ ಧನವನ್ನು 5 ರಿಂದ 8,000 ರೂ.ಗೆ ಹೆಚ್ಚಳ ಮಾಡಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಶಿಕ್ಷಣ ಸಚಿವರೂ ಹಾಗೂ ಅತಿಥಿ ಉಪನ್ಯಾಸಕರ ನಿಯೋಗದ ಜೊತೆ ಚರ್ಚೆ ಮಾಡಿದ ನಂತರ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದರು.

ಸಭೆಯ ನಂತರ ಸುದ್ದಿಗಾರರಿಗೆ ವಿಷಯ ತಿಳಿಸಿದ ಮುಖ್ಯಮಂತ್ರಿ ಅವರು, ಅತಿಥಿ ಉಪನ್ಯಾಸಕರ ಬಗ್ಗೆ ಸರ್ಕಾರ ಮಾನವೀಯ ಕಾಳಜಿ ಹೊಂದಿದೆ, ಸೇವಾ ಭದ್ರತೆ ನೀಡಲು ಕಾನೂನು ತೊಡಕು ಇರುವುದರಿಂದ ಸಾಧ್ಯವಾಗುವುದಿಲ್ಲ ಎಂದರು. ವಿರೋಧ ಪಕ್ಷದ ನಾಯಕನಾಗಿದ್ದಾಗಲೂ ಅತಿಥಿ ಉಪನ್ಯಾಸಕರ ಪರವಾಗಿ ತಾವು ದನಿ ಎತ್ತಿ ವೇತನ ಹೆಚ್ಚಳಕ್ಕೆ ಒತ್ತಾಯಿಸಿದ್ದನ್ನು ಸ್ಮರಿಸಿಕೊಂಡ ಮುಖ್ಯಮಂತ್ರಿಗಳು, ಇದೀಗ ಎರಡೇ ವರ್ಷದೊಳಗೆ ನಮ್ಮ ಸರ್ಕಾರ ಮತ್ತೆ ನಿಮ್ಮ ವೇತನ ಹೆಚ್ಚಳಕ್ಕೆ ಮುಂದಾಗಿದೆ, (3ನೇ ಪುಟಕ್ಕೆ)

REQUIRED
CIVIL ENGINEER'S
Qualification : Diploma/ BE Civil
Experience : 3 to 5 Years
(Exclusively in Water Supply & Lift Irrigation Project)
RAMALINGAM CONSTRUCTION COMPANY PVT LTD
Is hiring for Civil Engineer's (10 posts) in our
WATER SUPPLY PROJECT AT DAVANAGERE, KARNATAKA
Interested Candidates can mail their resume to
career@ramalingam.in
Ph. : 82771 62889
Only shortlisted candidates called for interview

10ನೇ ವರ್ಷದ ಪುಣ್ಯಸ್ಮರಣೆ



ಜನನ: 31-07-1951
ಲಿಂಗೈಕ್ಯ: 07-01-2014

ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆಯ ವಾಸಿ
ವಿಜಯ ಬ್ಯಾಂಕ್ ನಿವೃತ್ತ ನೌಕರರಾಗಿದ್ದ
ಲಿಂ॥ ಕಕ್ಕರಗೊಳ್ಳ ಗೌಡ್ರು ಲೋಕೇಶ್ವರಪ್ಪ
ಇವರು ಶಿವೈಕ್ಯರಾಗಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ
ಪತ್ನಿ : ಶ್ರೀಮತಿ ಕುಸುಮ ಲೋಕೇಶ್ವರಪ್ಪ, ದಾವಣಗೆರೆ
ಪುತ್ರ: ಶ್ರೀ ವೀರೇಶ್ ಪಟೇಲ್, ಗೌರವ ಕಾರ್ಯದರ್ಶಿ, ಡಾ. ಅಂಜು, ಜಂಟಿ ಕಾರ್ಯದರ್ಶಿ, ದವನ್ ಕಾಲೇಜ್ ಹಾಗೂ ಪುಟಾಣಿ ಅನವ್ ಗೌಡ್ರು
ಪುತ್ರಿ : ಶ್ರೀಮತಿ ವಿನುತ ಪಟೇಲ್, ಡಾ. ಹರೀಶ್ ಬಿ.ಜಿ, ಸಂಯೋಜನಾಧಿಕಾರಿ, ಎಂ.ಸಿ.ಎ. ವಿಭಾಗ, ಯುಬಿಡಿಟಿ ಕಾಲೇಜ್ ಮಾ॥ ಪೂರ್ವಿಕ್
ಸಹೋದರರಾದ : ಶ್ರೀ ಕೆ.ಜಿ. ಬಸವನಗೌಡ್ರು, ಶ್ರೀಮತಿ ದ್ರಾಕ್ಷಾಯಣಮ್ಮ, ಕಕ್ಕರಗೊಳ್ಳ.
ಶ್ರೀಮತಿ ಗಿರಿಜಮ್ಮ, ದಿ॥ ಕೆ.ಜಿ.ಪರಮೇಶ್ವರಪ್ಪ, ದಾವಣಗೆರೆ ಶ್ರೀ ಕೆ. ಜಿ. ವೀರಬಸಪ್ಪ, ಶ್ರೀಮತಿ ಮಹಾಲಕ್ಷ್ಮಿ, ದಾವಣಗೆರೆ.
ಮತ್ತು ಸಹೋದರಿಯರು ಹಾಗೂ ಮಕ್ಕಳು, ಗೌಡ್ರು ಮನೆತನದವರು ಹಾಗೂ ಬಂಧು-ಮಿತ್ರರು, ಕಕ್ಕರಗೊಳ್ಳ.
ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು
ದವನ್ ಕಾಲೇಜ್ ಹಾಗೂ ನೂತನ ಕಾಲೇಜ್, ದಾವಣಗೆರೆ
ಪಟೇಲ್ ವೀರಪ್ಪ ಸ್ಕೂಲ್, ಕಕ್ಕರಗೊಳ್ಳ ಮತ್ತು ವಿಜಯ ಬಳಗದ ಸ್ನೇಹಿತರು, ದಾವಣಗೆರೆ
PVS PATEL VEERAPPA SCHOOL
Spurthi Educational Trust (R) DAVAN

## ಕೋಲಾರ ಪ್ರಕರಣ ಸಿಬಿಐಗೆ ವಹಿಸಲು ಜಗಳೂರು ದಸಂಸ ಆಗ್ರಹ




ಜಗಳೂರು, ಜ.6- ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಯಡಿಹಳ್ಳಿ ಗ್ರಾಮದಲ್ಲಿ ದಲಿತರ ಗುಡಿಸಲಿಗೆ ಬೆಂಕಿ ಹಚ್ಚಿದ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಬೇಕು ಹಾಗೂ ಮನೆ ನಿರ್ಮಿಸಿ ಕೊಡಬೇಕು ಎಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿದ ಕಾರ್ಯಕರ್ತರು, ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಲಿಖಿತ ಮನವಿ ಸಲ್ಲಿಸಿದರು.

ಮುಖಂಡ ಪೂಜಾರ್ ಸಿದ್ದಪ್ಪ ಮಾತನಾಡಿ, ದಲಿತ ಕುಟುಂಬದ ಹನುಮಂತಪ್ಪನವರ ಮೂಕ ಪ್ರಾಣಿಗಳಾದ ಹಸುಗಳು, ರಾಮೇಗೌಡನ ಜಮೀನಿನಲ್ಲಿ ಮೇಯಿಸಿದ ಕಾರಣಕ್ಕೆ ಹನುಮಂತಪ್ಪ ಅವರಿಗೆ ಚಾಕು ಇರಿದಿದ್ದಲ್ಲದೆ, ಸಹೋದರನಾದ ರೆಡ್ಡೆಪ್ಪ ಅವರ ಮೇಲೆ ಹಲ್ಲೆ ಮಾಡಿ, ಗುಡಿಸಲಿಗೆ ಬೆಂಕಿ ಹಚ್ಚಿರುವುದು ಖಂಡನೀಯ ಎಂದರು.

ವಕೀಲ ಹನುಮಂತಪ್ಪ ಮಾತನಾಡಿ, ಮನುವಾದಿಗಳು ಕೋಲಾರ ಜಿಲ್ಲೆಯ ದಲಿತ ಸಮುದಾಯದ ಹನುಮಂತಪ್ಪ ಅವರ ಗುಡಿಸಲಿಗೆ ಬೆಂಕಿ ಹಚ್ಚಿರುವುದು ದೌರ್ಜನ್ಯದ ಪರಮಾವಧಿ, ಘಟನಾ ಸ್ಥಳಕ್ಕೆ, ಸಮಯಕ್ಕೆ ಸರಿಯಾಗಿ ಪೊಲೀಸರು ಆಗಮಿಸದಿದ್ದರೆ ಕಂಬಾಲಪಲ್ಲಿ ಪ್ರಕರಣ ಮರುಕಳಿಸುತ್ತಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಸಂಚಾಲಕ ಕುಬೇಂದ್ರಪ್ಪ, ಮುಖಂಡರಾದ ವಕೀಲ ಆರ್. ಓಬಳೇಶ್, ಮಾದಿಹಳ್ಳಿ ಮಂಜುನಾಥ್, ಶಿವಣ್ಣ, ರವಿ, ಮೆದಗಿನಕೆರೆ ಹನುಮಂತಪ್ಪ, ಮುನಿಸ್ವಾಮಿ, ಪಲ್ಲಾಗಟ್ಟೆ ರಂಗಪ್ಪ ಮತ್ತಿತರರು ಭಾಗವಹಿಸಿದ್ದರು.

# ರೆಡ್ಡಿ ಜನಾಂಗದ ಎಲ್ಲಾ ಪಂಗಡಗಳು ಒಂದಾಗಲು ಶ್ರೀಗಳು ಕಾರಣ

## ಹೊಸಹಳ್ಳಿ : ಹೇಮ-ವೇಮ ಸದ್ಬೋಧನಾ ವಿದ್ಯಾಪೀಠದ ದಶಮಾನೋತ್ಸವದಲ್ಲಿ ಸಚಿವ ರಾಮಲಿಂಗಾರೆಡ್ಡಿ ಮೆಚ್ಚುಗೆ



ಮಲೇಬೆನ್ನೂರು, ಜ.6- ಈ ಹಿಂದೆ ಹರಿದು ಹಂಚಿ ಹೋಗಿದ್ದ ರೆಡ್ಡಿ ಜನಾಂಗದ ಎಲ್ಲಾ ಪಂಗಡ ಗಳು ಕಳೆದ 7-8 ವರ್ಷಗಳಿಂದ ಒಂದಾಗಿದ್ದೇವೆ. ಇದಕ್ಕೆ ಶ್ರೀ ವೇಮನಾನಂದ ಶ್ರೀಗಳು ಕೂಡಾ ಕಾರಣ ಎಂದು ಸಾರಿಗೆ ಹಾಗೂ ಮುಜರಾಯಿ ಇಲಾಖೆಗಳ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಹೊಸಹಳ್ಳಿಯ ಮಹಾಯೋಗಿ ವೇಮನ ಸಂಸ್ಥಾನದ ರೆಡ್ಡಿ ಗುರುಪೀಠದಲ್ಲಿ ಹಮ್ಮಿಕೊಂಡಿರುವ ಹೇಮ-ವೇಮ ಸದ್ಬೋಧನಾ ವಿದ್ಯಾಪೀಠದ ದಶಮಾನೋತ್ಸವ ಸಮಾರಂಭದ 2ನೇ ದಿನವಾದ ಇಂದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕ, ಬೆಂಗಳೂರು ಭಾಗದ ರೆಡ್ಡಿ ಜನಾಂಗದವರು ವಿವಿಧ ಪಂಗಡಗಳಲ್ಲಿ ಹರಿದು ಹಂಚಿ ಹೋಗಿದ್ದರು. ಗುರುಪೀಠ ಸ್ಥಾಪಿಸಿದ ನಂತರ ವೇಮನಾನಂದ ಶ್ರೀಗಳ ಸಾನ್ನಿಧ್ಯದಲ್ಲಿ ಸಮಾಜದ ಹಿರಿಯರೆಲ್ಲರೂ ಸೇರಿಕೊಂಡು ಒಂದೇ ವೇದಿಕೆಯಲ್ಲಿ ಸೇರುವಂತೆ ಮಾಡಿದ್ದೇವೆ. ಈಗ ನಮ್ಮಲ್ಲಿ ಯಾವ ವ್ಯತ್ಯಾಸವೂ ಇಲ್ಲ. ನಾವೆಲ್ಲಾ ಒಂದಾಗಿ ಈ ಮಠವನ್ನು ಮತ್ತು ವಿದ್ಯಾ ಪೀಠವನ್ನು ಬೆಳೆಸೋಣ ಎಂದು ರಾಮಲಿಂಗಾರೆಡ್ಡಿ ಕರೆ ನೀಡಿದರು.

ಈ ದಿನ ಇಲ್ಲಿ ಶ್ರೀಗಳ ಆಶಯದಂತೆ 50 ಲಕ್ಷ ರೂ. ಅನುದಾನದಲ್ಲಿ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡಿದ್ದೇನೆ. ಶ್ರೀಗಳು ವಿದ್ಯೆಗೆ ಒತ್ತು ನೀಡಿ ಇಲ್ಲಿ ಸಾವಿರಾರು ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡುವ ಕೆಲಸ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಸಚಿವ ರಾಮಲಿಂಗಾರೆಡ್ಡಿ ಮೆಚ್ಚುಗೆ ವ್ಯಕ್ತ ಪಡಿಸಿದರು.

ಮಠದ ಶೈಕ್ಷಣಿಕ ಅಭಿವೃದ್ಧಿ ಬೆಂಗಳೂರಿನ ಉದ್ಯಮಿ ಜಯರಾಮರೆಡ್ಡಿ ಅವರು 1 ಕೋಟಿ ರೂ. ನೀಡಲಿದ್ದಾರೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಕಾನೂನು ಹಾಗೂ ಸಂಸದೀಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ. ಪಾಟೀಲ್ ಮಾತನಾಡಿ, ಸಮಾಜದ ಎಲ್ಲರ ಮನಸ್ಸುಗಳ ದೊಡ್ಡದಾಗಿದ್ದರಿಂದ ನಮ್ಮ ಎಲ್ಲಾ ಪಂಗಡಗಳು ಒಂದಾಗಿವೆ. ಇದರ ಪರಿಣಾಮವೇ ಈ ಹಿಂದೆ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಸಮಾಜದ 10 ಅಂಶಗಳ ಬೇಡಿಕೆ ಇಟ್ಟು ಈಡೇರಿಸಿಕೊಂಡಿದ್ದೇವೆ ಎಂದು ಹೇಳಿದರು.

ರಾಣೇಬೆನ್ನೂರಿನ ಶಾಸಕ ಪ್ರಕಾಶ್ ಕೋಳಿವಾಡ ಮಾತನಾಡಿ, ಶ್ರೀಗಳು ಮಠ ಕಟ್ಟುವುದಕ್ಕಿಂತ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ಕೆಲಸ ಮಾಡಿ ಮಾದರಿಯಾಗಿದ್ದಾರೆ. ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ವಿಷಯಗಳನ್ನು ಕಲಿಸುವ ಕೆಲಸವನ್ನೂ ಶ್ರೀಗಳು ಮಾಡುತ್ತಿದ್ದಾರೆ. ಕೌಶಲ್ಯ ಶಿಕ್ಷಣ ಮನುಷ್ಯನ ಬದುಕನ್ನು ಶ್ರೀಮಂತಗೊಳಿಸುತ್ತದೆ ಎಂದರು.

ಶ್ರೀ ವೇಮಾನಂದ ಸ್ವಾಮೀಜಿ, ಶ್ರೀ ಬಸವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಬೀಳಗಿ ಶಾಸಕ ಜೆ.ಟಿ. ಪಾಟೀಲ್, ಸಚಿವ ಎಂ.ಬಿ ಪಾಟೀಲ್ ಅವರ ಪತ್ನಿ ಶ್ರೀಮತಿ ಆಶಾ ಪಾಟೀಲ್, ಹುನಗುಂದದ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ್ ಮಾತನಾಡಿದರು.

ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಜಿ.ಪಂ. ಮಾಜಿ ಅಧ್ಯಕ್ಷ ಎ. ಗೋವಿಂದರೆಡ್ಡಿ, ಹೊಸಹಳ್ಳಿಯ ವೈ ದ್ಯಾವಪ್ಪರೆಡ್ಡಿ ನಂದಿಗಾವಿ ರಾಜಣ್ಣ ರೆಡ್ಡಿ ಬಿಳಸೂರಿನ ಬಿ.ಹೆಚ್. ತಿಪ್ಪಾರುದ್ರರೆಡ್ಡಿ, ರಂಗಪ್ಪರೆಡ್ಡಿ, ಹನುಮಂತರೆಡ್ಡಿ ಕಡ್ಲಗೋಂದಿ ಹನುಮಂತರೆಡ್ಡಿ, ವಿದ್ಯಾ ಪೀಠದ ಆಡಳಿತಾಧಿಕಾರಿ ಸುಭಾಸ್ ಉದ್ಯಮಿಗಳಾದ ಎನ್. ಶೇಖರ್‌ರೆಡ್ಡಿ, ಜಯಕುಮಾರ್ ರೆಡ್ಡಿ, ಸಿ.ಕೆ. ಒಂಟುಗೋಡಿ ಲಕ್ಷ್ಮಣರೆಡ್ಡಿ, ವೈದ್ಯರಾದ ಡಾ.ಗಿರೀಶ್ ಸೋನಾಲ್ಕಾರ್ ಡಾ.ಚನ್ನಪ್ಪ ಸಣ್ಣಕಟ್ಟಿ, ರೈಸ್‌ಮಿಲ್ ಮಾಲೀಕ ರಾಜಗೋಪಾಲರೆಡ್ಡಿ, ಕೋಗುಂಡಿ ಬಕ್ಕೇಶಪ್ಪ, ಜಿ. ಮಂಜುನಾಥ್ ಪಾಟೀಲ್, ಉದ್ಯಮಿ ಕಿಟ್ಟಿ, ಮಹಾಂತೇಶ್ ಬಿರಾದರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಹರಪನಹಳ್ಳಿ : ಸಂಚಾರಿ ಪೊಲೀಸ್ ಘಟಕ ಉದ್ಘಾಟನೆ



ಹರಪನಹಳ್ಳಿ, ಜ. 6 - ಪಟ್ಟಣದ ಹಳೇ ಪೊಲೀಸ್ ಠಾಣೆ ಆವರಣದಲ್ಲಿ ಸಂಚಾರಿ ಪೊಲೀಸ್ ಘಟಕವನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಡಿವೈಎಸ್‌ಪಿ ವೆಂಕಟಪ್ಪನಾಯಕ ಪೂಜೆ ನೆರವೇರಿಸುವುದರೊಂದಿಗೆ ಘಟಕವನ್ನು ಉದ್ಘಾಟಿಸಿ ಮಾತನಾಡಿ, ಹರಪನಹಳ್ಳಿ ಪಟ್ಟಣದಲ್ಲಿ ಜನ ಸಂದಣಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಆದ್ದರಿಂದ ವಿಜಯನಗರ ಜಿಲ್ಲಾ ಎಸ್‌ಪಿಯವರು ಪಟ್ಟಣದಲ್ಲಿ ತಾತ್ಕಾಲಿಕ ಸಂಚಾರಿ ಪೊಲೀಸ್ ಘಟಕ ಸ್ಥಾಪಿಸಲು ಅನುಮತಿ ನೀಡಿದ್ದಾರೆ ಎಂದರು.

ಈ ಸಂಚಾರಿ ಘಟಕದಲ್ಲಿ ಪಿಎಸ್‌ಐ ರುದ್ರಪ್ಪ ನೇತೃತ್ವದಲ್ಲಿ ಇಬ್ಬರು ಎಎಸ್‌ಐ, ಹನ್ನೆರಡು ಜನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಐ.ಬಿ. ವೃತ್ತ, ಹರಿಹರ ವೃತ್ತ, ಕೊಟ್ಟೂರು ವೃತ್ತ ಮುಂತಾದ ಕಡೆಗಳಲ್ಲಿ ಟ್ರಾಫಿಕ್ ಸಮಸ್ಯೆ ತಲೆ ದೋರುತ್ತಿದ್ದು ಈ ಸಮಸ್ಯೆ ನಿವಾರಿಸಲು ಈ ಘಟಕ ಕಾರ್ಯ ನಿರ್ವಹಿಸುತ್ತದೆ.

ಈ ಘಟಕಕ್ಕೆ ಸದ್ಯ ಎರಡು ದ್ವಿಚಕ್ರ ವಾಹನಗಳು ಹಾಗೂ ಕೆಲವೊಂದು ಸಾಮಗ್ರಿಗಳನ್ನು ನೀಡಲಾಗಿದೆ. ಜೀಪು ವಾಹನವನ್ನು ಸದ್ಯದಲ್ಲೆ ನೀಡಲಾಗುವುದು ಎಂದು ತಿಳಿಸಿದರು.

ಈಚೇಗೆ ಪಟ್ಟಣದಲ್ಲಿನ ಆಟೋ ಡ್ರೈವರ್‌ಗಳ ಸಭೆ ನಡೆಸಿ ಟ್ರಾಫಿಕ್ ಬಗ್ಗೆ ಅವರಿಗೆ ಅರಿವು ಮೂಡಿಸಿದ್ದೇವೆ. ಆಟೋದಲ್ಲಿರುವ ಕರ್ಕಶ ಧ್ವನಿ ವರ್ಧಕಗಳನ್ನು ಎರಡು ದಿನಗಳಲ್ಲಿ ತೆರವುಗೊಳಿಸಲು ಸೂಚಿಸಿದ್ದು ಅವರೂ ಸಹ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ರಾತ್ರಿ ಸಂದರ್ಭದಲ್ಲಿ ಕೇವಲ ಹತ್ತು ಜನ ಆಟೋ ಚಾಲಕರು ಕಾರ್ಯ ನಿರ್ವಹಿಸಲು ಒಮ್ಮತವಾಗಿದೆ ಎಂದು ಹೇಳಿದ ಅವರು ರಾತ್ರಿ ವೇಳೆ ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಬಾರದಂತೆ ನೋಡಿಕೊಳ್ಳಲು ಆಟೋ ಚಾಲಕರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿಪಿಐ ಎಂ. ನಾಗರಾಜ ಕಮ್ಮಾರ, ಪಿಎಸ್‌ಐ ಸಿ. ಶಂಭುಲಿಂಗ ಹಿರೇಮಠ, ಸಂಚಾರಿ ಘಟಕದ ಪಿಎಸ್‌ಐ ರುದ್ರಪ್ಪ, ಸಿಬ್ಬಂದಿ ಅಂಜಿನಪ್ಪ, ವೀರಣ್ಣ ಬಾರ್ಕಿ, ಎಚ್. ಮಂಜುನಾಥ್, ಅಂಬರೀಶ್, ಫೈಯಾಜ್, ಕೊಟ್ರೇಶ ಸೇರಿದಂತೆ ಗೃಹ ರಕ್ಷಕದಳದ ಸಿಬ್ಬಂದಿ ಇದ್ದರು.

## ಹರಿಹರ : ಬಾಲ್ಯದ ದಿನಗಳಲ್ಲಿ ಉತ್ತಮ ಗೆಳೆಯರ ಸಹವಾಸ ಬೇಕು



ಹರಿಹರ, ಜ. 6- ಬಾಲ್ಯದ ದಿನಗಳಲ್ಲಿ ಉತ್ತಮ ಗೆಳೆಯರನ್ನು ಹೊಂದಿದರೆ ಮುಂದಿನ ದಿನಗಳಲ್ಲಿ ಬದುಕು ಉನ್ನತ ಮಟ್ಟದಲ್ಲಿ ಸಾಗುತ್ತದೆ ಎಂದು ವ್ಯಾಪಾರೋದ್ಯಮಿ ಬೊಂಗಾಳೆ ಜಗನ್ನಾಥರಾವ್ ಅಭಿಪ್ರಾಯಪಟ್ಟರು.

ಇಲ್ಲಿನ ವಿದ್ಯಾನಗರ ಬಡಾವಣೆಯಲ್ಲಿ ನಡೆದ ಕರ್ನಾಟಕ ವಿಶ್ವ ವಿದ್ಯಾಲಯದ 1969-71 ನೇ ಸಾಲಿನ ಸಸ್ಯಶಾಸ್ತ್ರ ವಿಭಾಗದ ಸ್ನೇಹಿತರ 52ನೇ ವರ್ಷದ ಸಮ್ಮಿಲನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಓದುವ ವೇಳೆ ಸಹಪಾಠಿಗಳ ಜೊತೆಯಲ್ಲಿ ಕ್ರೀಡೆ, ಹಾಡು, ಸಂಗೀತ, ನೃತ್ಯ, ನಾಟಕ ಸೇರಿದಂತೆ ವಿವಿಧ ಸಂಸ್ಕೃತಿಯ ಹವ್ಯಾಸವನ್ನು ಹೊಂದಿದ್ದರಿಂದ 52 ವರ್ಷಗಳ ಸ್ನೇಹಿತರು ಸಮ್ಮಿಲನವನ್ನು ಮಾಡಿಕೊಳ್ಳುವಂತಹ ಸೌಭಾಗ್ಯ ಒದಗಿಬಂದಿತು. ಎಸ್.ಜೆ.ವಿ.ಪಿ. ಕಾಲೇಜಿನಲ್ಲಿ ಎಂ.ಎಸ್ಸಿ. ಬಿಎಡ್ ಪದವಿಯನ್ನು ಪಡೆದು, ಹಿರಿಯರ ಸಹಕಾರದೊಂದಿಗೆ ಹಾರ್ಡ್ ವೇರ್ ಅಂಗಡಿ ವ್ಯಾಪಾರ ವಹಿವಾಟು ಆರಂಭಿಸಿ ಬಿರ್ಲಾ, ಕಿರ್ಲೋಸ್ಕರ್ ಕಂಪನಿಯವರ ಜೊತೆಯಲ್ಲಿ ಉತ್ತಮ ಒಡನಾಟ ಹೊಂದಿದ ಪರಿಣಾಮ ದಾವಣಗೆರೆ ನಗರದಲ್ಲಿ ಪೂಜಾ ಇಂಟರ್ ನ್ಯಾಷನಲ್ ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡ ಪರಿಣಾಮ 1996 ರಲ್ಲಿ ಭಾರತೀಯ 'ಉದ್ಯೋಗ ರತ್ನ' ಪ್ರಶಸ್ತಿಯನ್ನು ಪಡೆಯುವುದು ಸಾಧ್ಯವಾಯಿತು ಎಂದು ಅವರು ಹೇಳಿದರು.

ನಮ್ಮ ಕುಟುಂಬದ ಸದಸ್ಯರಾದ ಬೊಂಗಾಳೆ ಕಾಳಪ್ಪನವರು ಕೂಡ 1981ರಲ್ಲಿ ಔಷಧಿ ವ್ಯಾಪಾರ ವಹಿವಾಟು ಆರಂಭಿಸಿ, ಅವರು ಕೂಡ ಇತ್ತೀಚಿನ ದಿನಗಳಲ್ಲಿ ನ್ಯಾಷನಲ್ ಅವಾರ್ಡ್, ಮದ್ರಾಸಿನ ಮದರ್ ತೆರೇಸಾ ಪ್ರಶಸ್ತಿಯನ್ನು ಪಡೆದಿದ್ದಾರೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಬೊಂಗಾಳೆ ಕಾಳಪ್ಪ, ಬೊಂಗಾಳೆ ರಾಘವೇಂದ್ರ, ಬೊಂಗಾಳೆ ಜ್ಞಾನೇಶ್ವರ, ಎಂ.ಸಿ. ಗಾಯತ್ರಿ, ಡಾ. ಶಿವಕುಮಾರ್, ಲಕ್ಷ್ಮಣ ಶಿಕಾರಿಪುರ, ಲಕ್ಷ್ಮೀಕಾಂತ್ ಶಿವಮೊಗ್ಗ, ಮಧುಕೇಶ್ವರ ಶಿಕಾರಿಪುರ, ಕೆ.ವಿ. ಹುಲಕೋಟಿ ಹುಬ್ಬಳ್ಳಿ, ಡಾ. ಸಿ.ಡಿ. ಪಾಟೀಲ್, ಡಾ. ರಾಜಣ್ಣ, ಸಾಸಲತ್ತಿ, ಮಾಲತಿ, ಇಂದ್ರಮ್ಮ, ಕಾತ್ಯಾಯಿನಿ, ಕರ್ಣೇಕರ್, ಜಿ.ಎನ್.ವಿ. ಪಾಟೀಲ್, ಬೆಲ್ಲದನವರ್, ವಿ. ರಾಮಕಾಂತ್, ಶಾಂತ್, ಬಸವರಾಜ್, ಪುನೀತ್ ಬೊಂಗಾಳೆ, ಭೋಜರಾಜ್ ಹೋವಳೆ, ಪ್ರತೀಕ್ ಬೊಂಗಾಳೆ, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ ಇತರರು ಹಾಜರಿದ್ದರು.

## ಹರಿಹರದ ಶ್ರೀ ಸಂಗಮೇಶ್ವರ ದೇವಸ್ಥಾನದಲ್ಲಿ ನಾಳೆ ಮಹೇಶ್ವರ ಜಾತ್ರೆ

ಹರಿಹರ, ಜ. 6 - ನಗರದ ಶ್ರೀ ಮಹೇಶ್ವರ ಸೇವಾ ಸಮಿತಿ ವತಿಯಿಂದ ತುಂಗಭದ್ರಾ ನದಿಯ ದಡದಲ್ಲಿರುವ ಶ್ರೀ ಸಂಗಮೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 8ಕ್ಕೆ ಮಹೇಶ್ವರ ಜಾತ್ರೆ ಮಹೋತ್ಸವ ನಡೆಯಲಿದೆ.

8 ರಂದು ಸೋಮವಾರ ಸಂಜೆ ಪಲ್ಲಕ್ಕಿ ಮಹೋತ್ಸವ ಮೆರವಣಿಗೆ ಹಳೇಪೇಟೆ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ ದಿಂದ ಆರಂಭಗೊಂಡು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಸಂಗಮೇಶ್ವರ ದೇವಸ್ಥಾನಕ್ಕೆ ಅಂತ್ಯಗೊಳ್ಳಲಿದೆ.

ದಿನಾಂಕ 9 ರಂದು ಶ್ರೀ ಸಂಗಮೇಶ್ವರ ಸ್ವಾಮಿಗೆ ಬೆಳಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಅಭಿಷೇಕ, ಅಲಂಕಾರ ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆದು ತದನಂತರ ಬೆಲ್ಲ, ಬಾಳೆಹಣ್ಣು, ಅನ್ನ ಪ್ರಸಾದ ವಿನಿಯೋಗ ನಡೆಯಲಿದೆ.

## ಭದ್ರಾ ನೀರಾವರಿ ಸಲಹಾ ಸಮಿತಿ ನಿರ್ಣಯ ಅವೈಜ್ಞಾನಿಕ

ದಾವಣಗೆರೆ, ಜ. 6- ಜನವರಿ 20 ರಿಂದ 12 ದಿನ ನೀರು ಹರಿಸುವುದು ಮತ್ತು 20 ದಿನ ನೀರು ನಿಲ್ಲಿಸುವುದು ಎಂದು ಭದ್ರಾ ನೀರಾವರಿ ಸಲಹಾ ಸಮಿತಿ ನಿರ್ಣಯ ಸಂಪೂರ್ಣ ಅವೈಜ್ಞಾನಿಕವಾಗಿದ್ದು, ದಾವಣಗೆರೆ ಜಿಲ್ಲೆಯ ರೈತರ ವಿರೋಧಿಯಾಗಿದೆ ಎಂದು ರೈತ ಮುಖಂಡ ಕೊಳೇನಹಳ್ಳಿ ಬಿ.ಎಂ. ಸತೀಶ್ ಖಂಡಿಸಿದ್ದಾರೆ. ಪ್ರಸ್ತುತ ಜಲಾಶಯದಲ್ಲಿ 21.54 ಟಿ.ಎಂ.ಸಿ ನೀರಿನ ಲಭ್ಯತೆ ಇದೆ. ಇಷ್ಟು ನೀರನ್ನು 72 ದಿನಗಳ ಕಾಲ ಹರಿಸಬಹುದಾಗಿದೆ. ಆದರೆ 6.90 ಟಿ.ಎಂ.ಸಿ ನೀರನ್ನು ಕುಡಿಯುವ ನೀರಿಗಾಗಿ ಎಂದು ಮೀಸಲಿಡಲಾಗಿದೆ ಮತ್ತು 2.40 ಟಿ.ಎಂ.ಸಿ ನೀರು ಆವಿಯಾಗುತ್ತದೆ ಎಂದು ಲೆಕ್ಕ ಹಾಕಲಾಗಿದೆ. ಇದು ತಲೆ ಬುಡವಿಲ್ಲದ ಲೆಕ್ಕಾಚಾರ. ದಾವಣಗೆರೆ ಜಿಲ್ಲೆಯ ರೈತರನ್ನು ಸಂಕಷ್ಟಕ್ಕೆ ದೂಡುವ ಕುತಂತ್ರ.

ಜಿಲ್ಲೆಯಲ್ಲಿ ನೀರಿನ ಹಾಹಾಕಾರದಿಂದ ರೈತರು ಪರಿತಪಿಸುತ್ತಿದ್ದಾರೆ. ಆದರೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಭೆಗೆ ಗೈರು ಹಾಜರಾಗಿರುವುದು ಜಿಲ್ಲೆಯ ರೈತರ ಹಿತಾಸಕ್ತಿ ಕಾಪಾಡುವಲ್ಲಿ ದಿವ್ಯ ನಿರ್ಲಕ್ಷ್ಯ ಧೋರಣೆ ಹೊಂದಿರುವುದು ಸ್ಪಷ್ಟವಾಗಿದೆ.

ಭದ್ರಾ ನೀರು ನಮ್ಮ ಹಕ್ಕು. ಡ್ಯಾಂನಲ್ಲಿ 72 ದಿನಗಳ ಅವಧಿಗೆ ನೀರು ಇರುವುದರಿಂದ ನೀರು ಬಿಡಿ ಎಂದು ಕೇಳಲಾಗುತ್ತಿದೆ. ರೈತರ ಕೂಗಿಗೆ ಕಿಂಚಿತ್ತೂ ಬೆಲೆ ಕೊಡದ ದಾವಣಗೆರೆ ಜಿಲ್ಲೆಯ ಜನ ಪ್ರತಿನಿಧಿಗಳು ರೈತರಿಗೆ ವಂಚನೆ ಮಾಡಿದ್ದಾರೆ.

ಈ ಹಿಂದೆ ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಡ್ಯಾಂನಲ್ಲಿ 148 ಅಡಿ ನೀರು ಇದ್ದಾಗಲೂ ಭತ್ತ ಬೆಳೆಯಲು ನೀರು ಕೊಟ್ಟರು. ಆದರೆ ಅವರ ಮಗ ಮಧು ಬಂಗಾರಪ್ಪನವರು ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ನೀರು ಕೊಡದೇ ವಂಚಿಸಿದ್ದಾರೆ ಎಂದು ಹಳ್ಳಿಗಳಲ್ಲಿ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ಸತೀಶ್ ಹೇಳಿದ್ದಾರೆ.

## ರಾಣೇಬೆನ್ನೂರಿನಲ್ಲಿ ವಿದ್ಯುತ್ ವ್ಯತ್ಯಯ

ಗಂಗಾಜಲ ತಾಂಡಾ, ಬಸಲಿಕಟ್ಟಿ ತಾಂಡಾ, ಗೋವಿಂದ ಬಡಾವಣೆ ಗ್ರಾಮ ಮತ್ತು ಕೃಷಿ ಪಂಪಸೆಟ್‌ಗಳಿಗೆ ಮತ್ತು ಬೀರೇಶ್ವರ ನಗರ, ವಿದ್ಯಾನಗರ, ವಿಶ್ವಬಂಧು ನಗರ, ಈಶ್ವರ ನಗರ, ಗೌರಿಶಂಕರ ನಗರ, ಉಮಾಶಂಕರ ನಗರ, ಶ್ರೀರಾಮ ನಗರ, ಪಿ.ಬಿ. ರಸ್ತೆ, ಹಳೇ ಎಲ್.ಐ.ಸಿ ಏರಿಯಾ, ಮೃತ್ಯುಂಜಯ ನಗರ, ವಿಕಾಶ ನಗರ, ಬ್ಯಾಂಕ್ ಕಾಲೋನಿ, ಹುಣಸಿಕಟ್ಟಿ ರಸ್ತೆ, ವಾಗೀಶ್ ನಗರ, ಮೆಡ್ಲೇರಿ ರಸ್ತೆ, ಚೌಡೇಶ್ವರಿ ನಗರ, ಪಂಪಾನಗರ, ವಿನಾಯಕ ನಗರ, ರಾಜೇಶ್ವರಿ ನಗರ, ಗೌರಿಶಂಕರ ನಗರಗಳ ವ್ಯಾಪ್ತಿಯಲ್ಲಿ ಇಂದು ಮಧ್ಯಾಹ್ನ 1 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


## ಭಾವಪೂರ್ಣ ಶ್ರದ್ಧಾಂಜಲಿ



ನಾಯಕ ವಿದ್ಯಾರ್ಥಿ ನಿಲಯದಲ್ಲಿ
ಸುಮಾರು 30 ವರ್ಷಗಳ ಕಾಲ ನಿರಂತರ ಜವಾನರಾಗಿ ಸೇವೆ ಸಲ್ಲಿಸಿದ್ದ

**ಶ್ರೀ ಹೆಚ್. ವೆಂಕಟೇಶ್ ರವರು**

ದಿನಾಂಕ 06.01.2024 ರ ಸಂಜೆ 5:00 ಗಂಟೆಗೆ ದೈವಾಧೀನರಾಗಿದ್ದು, ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಮತ್ತು ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ**
**ನಾಯಕ ವಿದ್ಯಾರ್ಥಿ ನಿಲಯ, ದಾವಣಗೆರೆ**


## 9 ರಂದು ಕದಳಿ ಮಹಿಳಾ ವೇದಿಕೆಯ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ

ದಾವಣಗೆರೆ, ಜ. 6- ಕದಳಿ ಮಹಿಳಾ ವೇದಿಕೆಯ 15ನೇ ವಾರ್ಷಿಕೋತ್ಸವ ಹಾಗೂ ಕದಳಿ ಶ್ರೀ ಪ್ರಶಸ್ತಿ ಪ್ರಧಾನ ಸಮಾರಂಭವು ಇದೇ ದಿನಾಂಕ 9ರ ಮಂಗಳವಾರ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಗದಗಿನ ಅಧ್ಯಾತ್ಮ ವಿದ್ಯಾಶ್ರಮದ ಡಾ. ನೀಲಮ್ಮ ತಾಯಿ ಅಸುಂಡಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಐಎಎಸ್ ಅಧಿಕಾರಿ ಡಾ. ಸಿ. ಸೋಮಶೇಖರ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಭಾಗವಹಿಸುವರು.

ಸಿರಿಗೆರೆಯ ಎಂ.ಬಿ.ಆರ್. ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಪ್ರೊ. ಟಿ. ನೀಲಾಂಬಿಕೆ ಅವರಿಗೆ ಈ ಬಾರಿಯ ಕದಳಿ ಶ್ರೀ ಪ್ರಶಸ್ತಿ ನೀಡಲಾಗುವುದು ಎಂದು ಕದಳಿ ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

ಅನ್‌ಮೋಲ್ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಯಶಾ ಮತ್ತು ದಿನೇಶ್ ಸಿ.ಜಿ. ಅವರು (ಸಾವಿತ್ರಮ್ಮ ಮತ್ತು ಪ್ರೊ. ಬಿ.ಕೆ. ಸಿದ್ದಪ್ಪ ಬಾಡ ) ದತ್ತಿ ದಾನಿಗಳಾಗಿದ್ದಾರೆ.

ಇದೇ ಸಂದರ್ಭದಲ್ಲಿ ಕಿರುವಾಡಿ ಗಿರಿಜಮ್ಮನವರ ಪ್ರಾಯೋಜಕತ್ವದಲ್ಲಿ ಕದಳಿ ಮಹಿಳಾ ವೇದಿಕೆಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಚಂದ್ರಿಕಾ ಮಂಜುನಾಥ್ ವಿವರಿಸಿದ್ದಾರೆ.

## ಮಲ್ಲಿಕಾರ್ಜುನ ಹಾಗೂ ಕಂಠಿ ದುರ್ಗಮ್ಮ ದೇವರ ಕಾರ್ತಿಕ

ದಾವಣಗೆರೆ, ಜ.6- ಕೆ.ಟಿ.ಜೆ. ನಗರ 10ನೇ ತಿರುವಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿದುರ್ಗಮ್ಮ ದೇವಿಯ ಕಾರ್ತಿಕೋತ್ಸವವನ್ನು ದಿನಾಂಕ 8 ರ ಸೋಮವಾರ ಸಂಜೆ 7.30 ಕ್ಕೆ ಮತ್ತು 9 ರ ಮಂಗಳವಾರ ಸಂಜೆ 7.30 ಕ್ಕೆ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ತಿಳಿಸಿದ್ದಾರೆ.

# ಕೃಷಿ ಸಾಲಗಾರರನ್ನು 'ರೀ ಸ್ಟ್ರಕ್ಚರ್'ನಿಂದ ಮುಕ್ತಗೊಳಿಸಲು ಒತ್ತಾಯ



### ರಾಣೇಬೆನ್ನೂರು

ರಾಣೇಬೆನ್ನೂರು, ಜ. 6- ಹಾವೇರಿ ಜಿಲ್ಲೆಯನ್ನು ಸರ್ಕಾರ ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಿದ ಪರಿಣಾಮ, ಬ್ಯಾಂಕಿನಲ್ಲಿ ಕೃಷಿ ಸಾಲ ಮಾಡಿ, ಕಟ್ ಬಾಕಿ ಆಗಿರುವ ರೈತರ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾರ್ಪಡಿಸಿ ಈ ವರ್ಷ ಸಾಲ ಮರುಪಾವತಿಸುವಂತೆ ರೈತರಿಗೆ ಒತ್ತಾಯಿಸಬಾರದೆಂಬ ಸರ್ಕಾರದ ಸದುದ್ಧೇಶ ರೈತರಿಗೆ ಮಾರಕವಾಗುತ್ತಿದೆ ಎಂದು ರಾಜ್ಯ ರೈತ ಸಂಘ ದೂರಿದೆ.

ಕಳೆದ 8 ರಿಂದ 15 ವರ್ಷದವರೆಗೂ ಸಾವಿರಾರು ರೈತರು ಸಾಲ ಮರುಪಾವತಿ ಮಾಡದೆ ಕಟ್ ಬಾಕಿದಾರರಾಗಿದ್ದಾರೆ (ಎನ್.ಪಿ) ಬ್ಯಾಂಕಿನವರು ಅಂತಹ ರೈತರನ್ನು ಸರ್ಕಾರದ ಬರಗಾಲ ಪೀಡಿತ ಘೋಷಣೆಯ ಆದೇಶದ ನಿಯಮದಂತೆ ಅವರನ್ನೆಲ್ಲಾ, ರೀಸ್ಟ್ರಕ್ಚರ್ ಚಾಲ್ತಿ ಸಾಲಗಾರರು ಅಂತಾ ತೀರ್ಮಾನಿಸಿ ಏನೂ ಗೊತ್ತಿಲ್ಲದ ರೈತರಿಗೆ ಸಹಿ ಮಾಡಿಸಿಕೊಂಡರೆ ಮುಗಿದೇ ಹೋಯಿತು. ಆ ರೈತರೆಲ್ಲಾ ಚಾಲ್ತಿ ಸಾಲಗಾರರಾಗಿ ಮಾರ್ಪಾಡಾಗಿ ಮುಂದೊಂದು ದಿನ ಆ ರೈತರು ಓ.ಟಿ.ಎಸ್. ಯೋಜನೆಗೂ ಒಳಗಾಗದೇ ಸಾಲಮನ್ನಾ ಯೋಜನೆಗೂ ಒಳಗಾಗದೇ ಸರ್ಕಾರದ ಬಹುದೊಡ್ಡ ಆರ್ಥಿಕ ಉಳಿತಾಯ ಯೋಜನೆಗಳಿಂದ ವಂಚಿತರಾಗುತ್ತಾರೆ.

ಈ ಅರಿವು ರೈತರಿಗೆ ಇರುವುದಿಲ್ಲ, ಬ್ಯಾಂಕಿನವರು ರೈತರಿಗೆ ತಿಳಿಸುವುದಿಲ್ಲ. ನಾವು ಸರ್ಕಾರದ ಆದೇಶವನ್ನು ಪಾಲಿಸಬೇಕಾಗುತ್ತದೆ ಅಂತಾ ಮೊಂಡತನ ಪ್ರದರ್ಶಿಸಿ ಅಮಾಯಕ ರೈತರಿಗೆ ಬಹುದೊಡ್ಡ ಅನ್ಯಾಯ ಮಾಡುತ್ತಿದ್ದಾರೆ.

ಬರಗಾಲ ಪೀಡಿತ ಜಿಲ್ಲೆ ಎಂದು ರಾಜ್ಯ ಸರ್ಕಾರ ಘೋಷಿಸಿದ ಸಂದರ್ಭದಲ್ಲಿ, ಕಟ್ ಬಾಕಿದಾರ ರೈತರಿಗೆ ಸಾಲ ಮರುಪಾವತಿಗೆ ಬ್ಯಾಂಕಿನವರು ಒತ್ತಾಯಿಸಬಾರದೆಂಬುದು ಒಳ್ಳೆಯ ಉದ್ದೇಶ. ಒಮ್ಮೊಮ್ಮೆ ರೈತರಿಗೆ ಬಹುದೊಡ್ಡ ನಷ್ಟವಾಗುತ್ತದೆ. ಕಾರಣ ಹಾವೇರಿ ಜಿಲ್ಲೆಯ ಯಾವ ಬ್ಯಾಂಕಿನವರೂ ಕೂಡಾ ರೈತರಿಗೆ 'ರೀಸ್ಟ್ರಕ್ಚರ್' ಫಾರ್ಮ್‌ಗೆ ಸಹಿ ಮಾಡಿಸಿಕೊಳ್ಳದಂತೆ ಸ್ಪಷ್ಟ ಆದೇಶ ಮಾಡಬೇಕೆಂದು ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅಣ್ಣಯ್ಯನವರಿಗೆ ಯುನಿಯನ್ ಬ್ಯಾಂಕ್ ಹುಬ್ಬಳ್ಳಿಯ ಡೆಪ್ಯೂಟಿ ಜನರಲ್ ಮ್ಯಾನೇಜರ್ ಹರಿರಾಮ್ ಎಸ್.ವಿ.ಎಸ್. ಅಸಿಸೆಂಟ್ ಜನರಲ್ ಮ್ಯಾನೇಜರ್ ಶ್ರೀಮತಿ ತೇಜಸ್ವಿನಿ ಅವರಿಗೆ ರೈತ ಮುಖಂಡರಾದ ರವೀಂದ್ರಗೌಡ ಎಫ್. ಪಾಟೀಲ, ಈರಣ್ಣ ಹಲಗೇರಿ ನೇತೃತ್ವದ ರೈತರ ತಂಡ ಮೊನ್ನೆ ದಿವಸ ಹುಬ್ಬಳ್ಳಿಗೆ ತೆರಳಿ ಚರ್ಚೆ ನಡೆಸಿ, ಸಂಷ್ಟದಲ್ಲಿರುವ ಜಿಲ್ಲೆಯ ರೈತರ ಪರವಾಗಿ ಮನವಿ ಅರ್ಪಿಸಿತು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ವಾರ ಭವಿಷ್ಯ

**ದಿನಾಂಕ : 07.01.2024 ರಿಂದ 13.01.2024ರವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಲು.ಲೇ.ಲೊ.ಅ.)**

ಮನೆಯ ಸದಸ್ಯರಿಂದ ಹೆಚ್ಚಿನ ಗೌರವಾದರಗಳನ್ನು ಅತಿಯಾಗಿ ನಿರೀಕ್ಷಿಸುವ ನಿಮಗೆ, ನಿಮ್ಮ ಮಾತಿನಲ್ಲಿ ಕಂಡುಬರುವ ಕಾಠಿಣ್ಯತೆ ಕಾಣುವುದಿಲ್ಲ, ಹಣದ ಹರಿವಿನಲ್ಲಿ ಹೆಚ್ಚಳ ಕಂಡುಬರಲಿದೆ. ಮಹಿಳೆಯರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವರು. ಮಕ್ಕಳಿಗೆ ಅಧ್ಯಯನದಲ್ಲಿ ಆಸಕ್ತಿ ಮೂಡಲಿದೆ. ಹಿರಿಯರು ಕೊಡಲಿರುವ ಸಲಹೆಗಳು ಮುಂದೆ ನಿಮಗೆ ಸದುಪಯೋಗವಾಗಲಿದೆ. ಕೂಡಿಟ್ಟ ಹಣ ದುಂದುವೆಚ್ಚವಾಗದಂತೆ ಎಚ್ಚರವಹಿಸಿ. ಭಾನು-ಮಂಗಳ-ಬುಧ-ಶುಭ ದಿನಗಳು

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಜಬರ್‌ದಸ್ತಿನಿಂದ ಆಗದೇ ಇರುವ ಕೆಲಸಗಳು ನಯವಿನಯಗಳಿಂದಾಗಲಿವೆ. ಶಸ್ತ್ರಚಿಕಿತ್ಸಾ ವೈದ್ಯರಿಗೆ ಬೇಡಿಕೆ ಹೆಚ್ಚಲಿದೆ. ಯುವಕರು ಸ್ವಂತ ವ್ಯವಹಾರದಲ್ಲಿ ತೊಡಗುವ ಮೊದಲು ಕೆಲ ಕಾಲ ಬೇರೆ ಕಡೆ ಕೆಲಸ ಮಾಡಿ ಕೊಂಚ ಅನುಭವ ಪಡೆಯುವುದು ಮೇಲು, ನರ ಸಂಬಂಧಿ ಆರೋಗ್ಯ ಸಮಸ್ಯೆಯಿರುವವರು ಸದ್ಯದ ಪರಿಸ್ಥಿತಿಯಲ್ಲಿ ಪ್ರಯಾಣ ಮಾಡದಿರುವುದು ಮೇಲು, ಮಡದಿ-ಮಕ್ಕಳ ದುಂದುವೆಚ್ಚ ನಿಮ್ಮನ್ನು ಹೈರಾಣಾಗಿಸಲಿದೆ. ಗುರುಗಳನ್ನು ಆರಾಧಿಸಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಸಂಗೀತಗಾರರು ಸ್ವ-ವೃತ್ತಿಯವರಿಂದಲೇ ಸ್ಪರ್ಧೆಯನ್ನು ಎದುರಿಸಬೇಕಾಗ ಬಹುದು, ಸಮಯಕ್ಕೆ ಸರಿಯಾಗಿ ಸೋದರಿಯಿಂದ ದೊರೆಯಲಿರುವ ಸಹಾಯದಿಂದ ನಿಮ್ಮ ಹಲವು ಸಮಸ್ಯೆಗಳು ಮಂಜಿನಂತೆ ಕರಗಲಿವೆ, ಸರ್ಕಾರದಿಂದಾಗಬೇಕಾಗಿರುವ ಕೆಲಸಗಳಿಗೆ ರಾಜಕಾರಣಿಗಳ ಮರ್ಜಿ ಅನಿವಾರ್ಯವಾಗಲಿದೆ, ಕೃಷಿ ಭೂಮಿಯನ್ನು ವಿಸ್ತರಿಸಲು ಇದು ಸಕಾಲ, ಹಣಕಾಸಿನ ಹರಿವು ಉತ್ತಮವಾಗಿರುವುದರಿಂದ ದೈನಂದಿನ ಬದುಕಿಗೇನೂ ಚಿಂತೆಬೇಡ. ಸೋಮ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಕೆಲಸವನ್ನು ಸಾಧಿಸಿದ ಹುಮ್ಮಸ್ಸು ನಿಮ್ಮಲ್ಲಿರುವ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ, ವ್ಯವಹಾರದಲ್ಲಿ ಹೆಚ್ಚಿನ ಲಾಭವಾಗಲಿದ್ದು, ಉಳಿತಾಯದ ಬಗ್ಗೆ ತುಸು ಯೋಚಿಸುವುದು ಮೇಲು, ಸರ್ಕಾರಿ ಉನ್ನತಾಧಿಕಾರಿಗಳು ಮಂತ್ರಿ ಮಹೋದಯರೊಂದಿಗೆ ವಾಗ್ವಾದ ಮಾಡಿ, ಮುಖಭಂಗ ಅನುಭವಿಸುವರು, ಮನೆಯ ಹಿರಿಯರು ತೆಗೆದುಕೊಳ್ಳುವ ಕೆಲವು ನಿರ್ಣಯಗಳು ನಿಮಗೆ ಸರಿ ಹೋಗುವುದಿಲ್ಲ, ಭೂಮಿ-ವ್ಯಾಪಾರದಿಂದ ಹೇರಳ ಕಮೀಷನ್ ದೊರೆಯಲಿದೆ. ಸೋಮ-ಮಂಗಳ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಯಾವುದೋ ಹಳೆಯ ವಿಷಯವೊಂದು ನಿಮ್ಮ ಮನಸ್ಸಿನ ತಾಕಲಾಟಕ್ಕೆ ಕಾರಣವಾಗಲಿದೆ, ಹಿರಿಯರ ಆರೋಗ್ಯದಲ್ಲಿ ಕಂಡು ಬರಲಿರುವ ವ್ಯತ್ಯಾಸ ನಿಮ್ಮ ದೈನಂದಿನ ಬದುಕನ್ನು ಬದಲಾಯಿಸಲಿದೆ, ಗೆಳೆಯರಾಡುವ ನಿಷ್ಠೂರ ಮಾತುಗಳನ್ನು ಸಹಿಸಿಕೊಳ್ಳದೇ ವಿಧಿಯಿಲ್ಲ, ನಿರುದ್ಯೋಗಿ ಪದವೀಧರರಿಗೆ ಸಾಧಾರಣ ವೇತನದ ನೌಕರಿ ದೊರೆಯಲಿದೆ. ನಿರೀಕ್ಷೆಗೂ ಮೀರಿದ ಯಶಸ್ಸು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ಕಾರಣವಾಗಲಿದೆ. ಗೋ ಸೇವೆ ಮಾಡಿ, ಭಾನು-ಬುಧ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಆದಾಯ ಉತ್ತಮವಾಗಿದ್ದರೂ ಅದೇ ಪ್ರಮಾಣದ ಖರ್ಚೂ ಇರುವುದರಿಂದ ಉಳಿತಾಯದ ಬಗ್ಗೆ ಚಿಂತಿಸದಿರುವುದು ಮೇಲು, ಉದ್ಯಮಿಗಳಿಗೆ ಆಲಸ್ಯತನ ಅಷ್ಟು ಒಳ್ಳೆಯದಲ್ಲ. ಆಸ್ತಿಗೆ ಸಂಬಂಧಿಸಿದಂತೆ ಹಿರಿಯರೊಂದಿಗೆ ರಾಜೀ-ಪಂಚಾಯ್ತಿ ಮುಖಾಂತರ ಹೊಂದಾಣಿಕೆ ಮಾಡಿಕೊಳ್ಳುವುದು ಉತ್ತಮ, ನರ ಸಂಬಂಧಿ ಅನಾರೋಗ್ಯ ಸಮಸ್ಯೆ ನಿಮ್ಮ ಉತ್ಸಾಹವನ್ನು ಕುಗ್ಗಿಸಲಿದೆ. ಮಂಗಳ ಕಾರ್ಯದ ಕೆಲಸವನ್ನು ಎಲ್ಲರಿಗೂ ವಹಿಸುವುದು ಉತ್ತಮ, ಹೊಸ ವ್ಯವಹಾರವನ್ನು ವಿಸ್ತರಿಸುವ ಮೊದಲು ಮತ್ತೊಮ್ಮೆ ಯೋಚಿಸುವುದು ಮೇಲು, ಗುರುಗಳ ಸೇವೆ ಮಾಡಿ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಹಲವು ಕಾಲದಿಂದ ಆಸ್ತಿ ಕೊಳ್ಳಬೇಕೆಂಬ ನಿಮ್ಮ ಬಯಕೆ ಮತ್ತೆ ಕೆಲಕಾಲ ಮುಂದೆ ಹೋಗಲಿದೆ, ಅತಿಥಿಗಳ ನಿರಂತರ ಗಮನಾಗಮನದಿಂದ ಹಣಕಾಸಿನ ಲೆಕ್ಕಾಚಾರ ದಲ್ಲಿ ವ್ಯತ್ಯಾಸ ಉಂಟಾಗಲಿದೆ. ನಿಮ್ಮ ಅಭಿಪ್ರಾಯವನ್ನು ಮತ್ತೊಬ್ಬರ ಮೇಲೆ ಹೇರುವ ನಿಮ್ಮ ಯತ್ನ ವಿಫಲವಾಗಲಿದೆ. ಮೊಣಕಾಲು ಅಥವಾ ಕೀಲು ಬಾಧೆಯಿರುವವರಿಗೆ ವೈದ್ಯರ ಸಲಹೆ ಬೇಕಾಗಬಹುದು, ಮಹಿಳೆಯರಿಗೆ ಉತ್ತಮ ದಿನಗಳು ಅವಿವಾಹಿತರಿಗೆ ಕಂಕಣ ಭಾಗ್ಯ ಒದಗಿಬರಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಬೇಳೆ ಕಾಳು ಮೊದಲಾದ ದಿನಸಿ ವ್ಯಾಪಾರಿಗಳಿಗೆ ಉತ್ತಮ ವಹಿವಾಟಿನಿಂದಾಗಿ ಲಾಭಾಧಿಕ್ಯವಾಗಲಿದೆ. ಕುಟುಂಬದಲ್ಲಿ ಉಂಟಾಗಬಹುದಾದ ಭಿನ್ನಾಭಿಪ್ರಾಯವನ್ನು ಆರಂಭದಲ್ಲಿಯೇ ಚಿವುಟಿಹಾಕುವುದು ಮೇಲು, ವಿದೇಶದಲ್ಲಿ ಅಧ್ಯಯನ ಮಾಡಬೇಕೆಂಬ ವಿದ್ಯಾರ್ಥಿಗಳಿಗೆ ಸಮಾಜದಿಂದ ಹೆಚ್ಚಿನ ನೆರವು ದೊರೆಯಲಿದೆ. ಅರಿವಿಲ್ಲದ ವಿಷಯದ ಬಗ್ಗೆ ಪಂಡಿತರಂತೆ ಮಾತನಾಡಲು ಹೋಗಬೇಡಿ, ಇಲ್ಲವಾದಲ್ಲಿ ಅವಮಾನ ತಪ್ಪಿದ್ದಲ್ಲ. ಭಾನು-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹಣಕಾಸಿನ ಸಂಪಾದನೆಗೆ ಹೆಚ್ಚಿನ ಗಮನ ಕೊಡುವುದರಿಂದ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಲಿದೆ, ದುರ್ವ್ಯಸನಿಗಳಿಂದ ದೂರವಿರುವುದು ಮೇಲು, ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರು ಮೇಲಾಧಿಕಾರಿಗಳ ವಶೀಲಿಯಿಂದ ಕಾರ್ಯ ಸಾಧಿಸುವರು. ಆಸ್ತಿ ಹಂಚಿಕೆ ವಿಚಾರದಲ್ಲಿ ಸೋದರನೊಂದಿಗೆ ಇರುಸು ಮುರುಸಾಗಲಿದೆ. ಬಾಕಿ ಹಣ ವಸೂಲಿ ವಿಚಾರದಲ್ಲಿ ಉದಾಸೀನತೆ ಸಲ್ಲದು, ತೀರ್ಥಯಾತ್ರೆ ಮಾಡುವಿರಿ, ಗುರುಗಳನ್ನು ಆರಾಧಿಸಿ. ಬುಧ-ಗುರು-ಶುಕ್ರ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಲೌಕಿಕ ಚಿಂತೆಗಳನ್ನು ಬಿಟ್ಟು, ಸ್ವಂತ ಕಾರ್ಯಗಳ ಬಗ್ಗೆ ಹೆಚ್ಚಿನ ಗಮನಹರಿಸುವಿರಿ, ಇದು ಒಂದು ರೀತಿಯಲ್ಲಿ ಒಳ್ಳೆಯದೆಂದೇ ಹೇಳಬಹುದು, ಸೋದರನ ವೃತ್ತಿಯಲ್ಲಿ ಪ್ರಗತಿ ಕಂಡುಬರಲಿದೆ. ಸೋದರಿಯ ಮದುವೆ ಪ್ರಸಂಗ ಮುಂದುವರೆಯಲಿದೆ. ಲಲಿತ ಕಲಾಸಕ್ತರಿಗೆ ಹೆಚ್ಚಿನ ಬೆಂಬಲ ದೊರೆಯಲಿದೆ, ನವದಂಪತಿಗಳಲ್ಲಿ ತುಸು ಹುಸಿ ಕೋಪ ಮೂಡಿ ಮಾಯವಾಗಲಿದೆ. ಮಗನು ಅಧ್ಯಾತ್ಮವಿದ್ಯೆಯ ಕಡೆ ಹೆಚ್ಚಿನ ಗಮನಕೊಡುವನು, ವಿಷ್ಣು ಸಹಸ್ರನಾಮ ಪಠಿಸಿ ಸೋಮ-ಗುರು-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ನೀವು ಮಾಡಬೇಕಾಗಿರುವ ಕೆಲಸ ಕಾರ್ಯಗಳನ್ನು ಮತ್ತೊಬ್ಬರಿಗೆ ಒಪ್ಪಿಸುವುದು ವ್ಯಾವಹಾರಿಕ ದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲ, ಅರಿಯದ ವಿಷಯದ ಬಗ್ಗೆ ಅನುಭವಿಗಳಿಂದ ಹಿರಿಯರಿಂದ ಸಲಹೆ, ಸೂಚನೆಗಳನ್ನು ಪಡೆಯಿರಿ, ಬ್ಯಾಂಕ್ ನೌಕರರು ತಮ್ಮ ಕರ್ತವ್ಯದಲ್ಲಿ ಮೈಯೆಲ್ಲಾ ಕಣ್ಣಾಗಿರುವುದು ಒಳಿತು, ಪರರ ವೈಯಕ್ತಿಕ ವಿಚಾರದಲ್ಲಿ ನಿಮ್ಮ ಪ್ರವೇಶ ಬೇಡ, ಇಲ್ಲವಾದಲ್ಲಿ ಅಪಮಾನ ತಪ್ಪಿದ್ದಲ್ಲ. ಮಿತಿಮೀರುತ್ತಿರುವ ಖರ್ಚು-ವೆಚ್ಚಗಳ ಮೇಲೆ ಕಡಿವಾಣ ಹಾಕಿ. ಸೋ, ಗುರು, ಶುಕ್ರವಾರ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನೆರವು ದೊರೆಯುತ್ತದೆಯೆಂದು ಕಂಡ ಕಂಡವರನ್ನು ಬೇಡುವುದರಿಂದ ಆರ್ಥಿಕ ಸುಳಿಗೆ ಸಿಲುಕಬಹುದು. ಮನೆ ಪಾಠದಿಂದ ಅಧ್ಯಾಪಕರ ಆದಾಯ ಹೆಚ್ಚಲಿದೆ.ವಿದೇಶದಲ್ಲಿರುವ ಮಗನ ಉದ್ಯೋಗದಲ್ಲಿ ಪ್ರಗತಿ ಕಾಣಲಿದೆ. ಮಹಿಳೆಯರು ತಮ್ಮ ದುಡುಕಿನ ನಡಾವಳಿಯಿಂದಾಗಿ ಕುಟುಂಬದ ಸಮಸ್ಯೆಗಳನ್ನು ಹೆಚ್ಚಿಸುವರು. ಜಾತ್ರೆ ಮೊದಲಾದ ಕಡೆ ಹೋಗುವಾಗ ಚಿಕ್ಕಮಕ್ಕಳ ಬಗ್ಗೆ ಎಚ್ಚರದಿಂದಿರಿ ವಿದ್ಯಾರ್ಥಿಗಳಿಗೆ ಅತಿಯಾದ ಆತ್ಮವಿಶ್ವಾಸ ಸಲ್ಲದು. ಭಾನು-ಸೋಮ-ಗುರು-ಶುಭ ದಿನಗಳು.

# 68ರ ಸಂಭ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

ಭಾರತದಲ್ಲಿ ಮಹಾಪುರುಷರೆನಿಸಿಕೊಂಡವರು ಅವರ ಜೀವನಶೈಲಿ ನುಡಿದ ಧರ್ಮಬೋಧನೆಗಳು ಆದರ್ಶಪ್ರಾಯ ಹಾಗೂ ಪ್ರಸ್ತುತವಾಗಿವೆ. ನಾವು ಧೃತಿಗೆಟ್ಟಾಗ, ಸಂಕಷ್ಟದಲ್ಲಿರುವಾಗ ಆ ಮಹಾಪುರುಷರ ತತ್ವಗಳೇ ನಮಗೆ ದಾರಿದೀಪವಾಗಿ ಆದರ್ಶ ಜೀವನ ನಡೆಸಲು ಮಹಾಪುರುಷರು ಮಹಾಗುರುಗಳಾಗಿ ನಮಗೆ ಗೋಚರಿಸುತ್ತಾರೆ. ಇಂತಹ ಪವಿತ್ರ ಸಾಲಿನಲ್ಲಿ ರಾಷ್ಟ್ರೀಯ ಗುರುಪೀಠವಾಗಿ ಪಂಚಪೀಠಗಳಲ್ಲೊಂದಾದ ಬಾಳೇಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನಾ ಮಹಾಪೀಠವು ಅಸಂಖ್ಯಾತ ಮಹಿಮಾನ್ವಿತರನ್ನು ಶಿವಯೋಗಿಗಳನ್ನು, ಮಹಾತಪಸ್ವಿಗಳನ್ನು, ಪರಮಾಚಾರ್ಯರನ್ನು ಪಡೆದ ಪುಣ್ಯಭೂಮಿಯಾಗಿ ಸೃಷ್ಟಿ ಸೌಂದರ್ಯದ ಮಡಿಲು ಮಲಯಾಚಲ ತಪೋಭೂಮಿಯಾಗಿ ಅಧ್ಯಾತ್ಮಿಕ ಕೇಂದ್ರವಾಗಿ ನೆಲೆ ನಿಂತಿದೆ.

ಪ್ರಸ್ತುತ ಶ್ರೀ ರಂಭಾಪುರಿ ಮಹಾಪೀಠದ ಒಡೆಯರಾದ ಶ್ರೀ ಡಾ. ವೀರಸೋಮೇಶ್ವರ ಜಗದ್ಗುರುಗಳು ಕ್ರಿಯಾಶೀಲ ಶ್ರೇಷ್ಠ ಧಾರ್ಮಿಕ ಮಹಾಪುರುಷರಾಗಿದ್ದಾರೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಹಳ್ಯಾಳ ಗ್ರಾಮದ ಪ್ರಸಿದ್ಧ ಹಿರೇಮಠದ ವೇ. ಚನ್ನಬಸವಾರ್ಯರು ಮತ್ತು ಸೌಭಾಗ್ಯವತಿ ಶ್ರೀಮತಿ ಚನ್ನಬಸವಾಂಬೆಯರ ಪುಣ್ಯಗರ್ಭದಲ್ಲಿ ದಿನಾಂಕ 07-01-1956 ರಲ್ಲಿ ಜನಿಸಿದರು.

ಪ್ರಾಥಮಿಕ ಶಿಕ್ಷಣ ಹಳ್ಯಾಳದಲ್ಲಿ ಮಾಧ್ಯಮಿಕ ಶಿಕ್ಷಣ ಗದಗ ನಗರದಲ್ಲಿ ಹಾಗೂ ಉನ್ನತ ಶಿಕ್ಷಣ ರಾಜಧಾನಿ ಬೆಂಗಳೂರಿನಲ್ಲಿ ಪೂರೈಸಿದರು.

ತಮ್ಮ 20ನೇ ವಯಸ್ಸಿನಲ್ಲೇ 1976ರಲ್ಲಿ ಹಳ್ಳಿಯಾಳ ಹಳೇಹುಬ್ಬಳ್ಳಿ ಪಂಚಗೃಹ ಹಿರೇಮಠದ ಪಟ್ಟಾಧ್ಯಕ್ಷರಾಗಿ ನಂತರ 1985 ರಲ್ಲಿ ಇತಿಹಾಸ ಪ್ರಸಿದ್ಧ ಶಿವಗಂಗಾ ಕ್ಷೇತ್ರದ ಮೇಲಣ ಗವಿಮಠದ ಪಟ್ಟಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಶಿವಪೂಜಾ ದುರಂಧರ ಲಿಂ. ಶ್ರೀ ವೀರಗಂಗಾಧರ ಜಗದ್ಗುರುಗಳವರ ಮತ್ತು ಚತುರ್ಭಾಷಾ ವಿಶಾರದ ಲಿಂ. ಶ್ರೀ ವೀರರುದ್ರಮುನಿ ಜಗದ್ಗುರುಗಳವರ ಅಂತರಂಗದ ಅನುಗ್ರಹಕ್ಕೆ ಪಾತ್ರರಾಗಿ, ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಪ್ರಾದುರ್ಭಸಿದ ಕೊಲ್ಲಿಪಾಕಿ ಶ್ರೀ ಸೋಮೇಶ್ವರ ಮಹಾಲಿಂಗದ ಮೂಲ ನಾಮಾಂಕಿತವನ್ನು ಹೊಂದುವ ಮೂಲಕ ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳವರು ಶ್ರೀ ಪೀಠದ 121ನೇ ಜಗದ್ಗುರುಗಳಾಗಿ ಪೀಠಾರೋಹಣ ಹೊಂದುವ ಮೂಲಕ ಸಂಕ್ರಾಂತಿಯನ್ನೇ ಮಾಡಿದ್ದಾರೆ.

ಪರಮಪೂಜ್ಯರು ಪೀಠಾರೋಹಣ ಹೊಂದಿದ ಪ್ರಥಮ ದಿನವೇ ಲೋಕಕಲ್ಯಾಣಕ್ಕಾಗಿ ಯೋಜನಾಷ್ಟಕ ಬಿಡುಗಡೆ ಮಾಡಿ ಸಾಹಿತ್ಯ - ಸಂಸ್ಕೃತಿ ಸಂವರ್ಧಿಸಲಿ। ಶಾಂತಿ - ಸಮೃದ್ಧಿ ಸರ್ವರಿಗಾಗಲೀ ಎಂಬ ಅಮೋಘ ಸಂದೇಶವನ್ನು ನಾಡಿಗೆ ನೀಡಿದ ದಿವ್ಯಾತ್ಮರಾಗಿದ್ದಾರೆ. ಪೂಜ್ಯರು ಬರೀ ಮಾತನಾಡುವವರಲ್ಲ ಕೃತಿಯಲ್ಲಿ ಮಾಡಿತೋರಿಸುವ ಛಲದಂಕ ಮಲ್ಲರೆಂಬುದನ್ನು ತೋರಿಸಿ ಇತಿಹಾಸ ನಿರ್ಮಿಸಿದ್ದಾರೆ. ಅವರ ಯೋಜನೆಗಳ ಸಂಕಲ್ಪಗಳು ಕಾಮಧೇನು ಕಲ್ಪವೃಕ್ಷವಿದ್ದಂತೆ. ಶ್ರೀ ಪೀಠದ ಸರ್ವಾಂಗೀಣ ಅಭಿವೃದ್ಧಿಯ ಜೊತೆಗೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯ, ಸಂಗೀತ, ಕಲೆ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅದ್ವಿತೀಯ ಅಭೂತ ಪೂರ್ವ ಸಾಧನೆ ಮಾಡುವ ಮೂಲಕ ಸುವರ್ಣಾಕ್ಷರಗಳಲ್ಲಿ ದಾಖಲಿಸುವಂತೆ ಸಾಧನೆಯ ಸಹ್ಯಾದ್ರಿಯಾಗಿ ವಿಜೃಂಭಿಸಿದ್ದಾರೆ. ಪೂಜ್ಯರ ಮಹಾಕರ್ತೃತ್ವ ಶಕ್ತಿಯಿಂದ ಶ್ರೀಪೀಠವು ಜ್ಞಾನ ಗಂಗೋತ್ರಿಯಾಗಿ ಆಕರ್ಷಕ ಪ್ರವಾಸಿತಾಣವಾಗಿ, ಬೃಹದಾಕಾರವಾಗಿ ಬೆಳೆದು ಪೂರ್ವಾಚಾರ್ಯರ ಶೇಷ ಕನಸುಗಳನ್ನು ನನಸು ಮಾಡುವ ಮೂಲಕ ಶ್ರೀಮಂತಗೊಳಿಸಿ, ಶ್ರೀಪೀಠಕ್ಕೆ ಆಧುನಿಕ ಸ್ಪರ್ಶ ನೀಡಿದ್ದಾರೆ.



ಶ್ರೀಪೀಠದ ಪರಿಸರದಲ್ಲಿ ಹಾಗೂ ನಾಡಿನಾದ್ಯಾಂತ ಅರ್ಥಪೂರ್ಣ ರಚನಾತ್ಮಕ ಮಹತ್ತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ತೆಲಂಗಾಣ ರಾಜ್ಯದ ಕೊಲ್ಲಿಪಾಕಿಯಲ್ಲಿ ಪರಶಿವನ ಸದ್ಯೋಜಾತ ಮುಖಸಂಜಾತ ಶ್ರೀ ಸೋಮೇಶ್ವರ ಮಹಾಲಿಂಗದಿಂದ ಅವತರಿಸಿದ ಆದಿಜಗದ್ಗುರು ಶ್ರೀ ರೇಣುಕಾಚಾರ್ಯರ ಮೂಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳುವ ಮೂಲಕ ಶ್ರೀಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ ಸದ್ಭಕ್ತರ ಸಹಕಾರದಿಂದ ಅವಿರತ ಶ್ರಮಿಸುತ್ತಿದ್ದಾರೆ.

ಬಾಳೇಹೊನ್ನೂರು ಶ್ರೀಪೀಠದ ಪರಿಸರದಲ್ಲೂ ಕೂಡಾ 51 ಅಡಿ ಎತ್ತರದ ಆದಿಜಗದ್ಗುರು ಶ್ರೀ ರೇಣುಕಾಚಾರ್ಯರ ಲಿಂಗೋದ್ಭವ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸುವ ನಿಮಿತ್ತ ಈಗಾಗಲೇ ಭರದಿಂದ ಕಾರ್ಯ ಸಾಗುತ್ತಿರುವುದು ಹರ್ಷದ ಸಂಗತಿಯಾಗಿದೆ. ಪ್ರತಿನಿತ್ಯವೂ ಲೋಕಕಲ್ಯಾಣ ಹಾಗೂ ವಿಶ್ವಶಾಂತಿಗಾಗಿ ಇಷ್ಟಲಿಂಗ ಮಹಾಪೂಜೆ ನೆರವೇರಿಸುವ ಮೂಲಕ ಬಂದ ಭಕ್ತಾದಿಗಳ ಸಕಲ ಸಂಕಷ್ಟಗಳ ಪರಿಹಾರಕ್ಕೆ ಪ್ರಾಂಜಲ ಮನಸ್ಸಿನಿಂದ ಸ್ಪಂದಿಸಿ, ಮಾತೃ ವಾತ್ಸಲ್ಯ ಕರುಣಿಸುತ್ತಿದ್ದಾರೆ. ಸದಾ ಹಸನ್ಮುಖಿಯಾಗಿ ಪ್ರಸನ್ನಮುಖಿಯಾಗಿ ಸಭೆ ಸಮಾರಂಭಗಳಲ್ಲಿ ಗಾಂಭೀರ್ಯವದನರಾಗಿ ವೈರಾಗ್ಯ ಮತ್ತು ವೈಭವಕ್ಕೂ ಹೆಸರಾದ ಶ್ರೀ ಪೀಠಕ್ಕೆ ಘನತೆ ಗೌರವ ತರುವ ಮೂಲಕ ವೀರಶೈವ ಧರ್ಮದ ಪ್ರಾಚೀನ ಪರಂಪರೆಯನ್ನು ಸಂರಕ್ಷಿಸಲು ಹಗಲಿರುಳೆನ್ನದೇ ಅವಿರತ ಶ್ರಮಿಸುವ ಧರ್ಮಧೂತರಾಗಿದ್ದಾರೆ.

ತೆಲಂಗಾಣ ರಾಜ್ಯದ ಕೊಲನುಪಾಕ (ಕೊಲ್ಲಿಪಾಕಿ) ಪವಿತ್ರ ತಾಣ ಶ್ರೀ ಜಗದ್ಗುರು ರೇಣುಕಾಚಾರ್ಯರು ಆವಿರ್ಭವಿಸಿದ ಶ್ರೀ ಚಂಡಿಕಾಂಬಾ ಸಮೇತ ಸ್ವಯಂಭೂ ಶ್ರೀ ಸೋಮೇಶ್ವರಸ್ವಾಮಿ ದೇಗುಲದ ಸುಂದರ ಪ್ರಾಂಗಣದಲ್ಲಿ ಶ್ರೀ ಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ 68ನೇ ಜನ್ಮದಿನೋತ್ಸವವು ದಿನಾಂಕ 7ರ ಭಾನುವಾರ (ಇಂದು) ಶ್ರದ್ಧಾ - ಭಕ್ತಿಯೊಂದಿಗೆ ಜರುಗಲಿದೆ.

**- ಶ್ರೀ ಮಲ್ಲಿಕಾರ್ಜುನಸ್ವಾಮಿ ಕಲ್ಮಠ**
'ಆಚಾರ್ಯ ಸೇವಾಸಂಜೀವಿನಿ'
ಪ್ರಶಸ್ತಿ ಪುರಸ್ಕೃತರು
ಚಿರಸ್ತಹಳ್ಳಿ, ಹರಪನಹಳ್ಳಿ ತಾಲ್ಲೂಕು.

# ಬಣ ರಾಜಕೀಯ ಶಮನಕ್ಕೆ ಸುರ್ಜೇವಾಲ ಮಧ್ಯಸ್ಥಿಕೆ

ಬೆಂಗಳೂರು,ಜ. 6- ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿನ ಬಣ ರಾಜಕೀಯ ಶಮನಗೊಳಿಸಲು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಧ್ಯ ಪ್ರವೇಶವಾಗಿದ್ದು, ಬರುವ 10ರಂದು ಮೂರು ದಿನಗಳ ರಾಜ್ಯ ಭೇಟಿಗೆ ಆಗಮಿಸುತ್ತಿದ್ದಾರೆ.



**ಬುಧವಾರ ರಾಜ್ಯಕ್ಕೆ ಬರಲಿರುವ ಕಾಂಗ್ರೆಸ್ ಪಕ್ಷದ ಉಸ್ತುವಾರಿ**

ಬಣ ರಾಜಕೀಯ ತಿಳಿಗೊಳಿಸುವುದರ ಜೊತೆಗೆ ಮುಂಬರುವ ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಸುದೀರ್ಘ ಮಾತುಕತೆ ನಡೆಸಲಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ರಾಜ್ಯ ಘಟಕ ಪ್ರತ್ಯೇಕ ವರದಿಗಳನ್ನು ನೀಡಿದ್ದರೂ ಅದಕ್ಕೆ ತೃಪ್ತರಾಗದ ವರಿಷ್ಠರು ಪಕ್ಷದ ಎಲ್ಲಾ ಹಂತದ ಕಾರ್ಯಕರ್ತರ ಅಭಿಪ್ರಾಯ ಪಡೆಯಲು ನಿರ್ಧರಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಆಂತರಿಕ ಕಿತ್ತಾಟ ವರಿಷ್ಠರಿಗೂ ತಲೆನೋವಾಗಿದೆ. ಮೇಲ್ನೋಟಕ್ಕೆ ಎಲ್ಲವೂ ಸರಿ ಎನಿಸಿ ದರೂ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲೂ ದ್ವಂದ್ವ ನಿಲುವುಗಳು ಕಂಡು ಬಂದಿವೆ.

ಜೊತೆಗೆ ಮುಖ್ಯಮಂತ್ರಿ ಬಣಕ್ಕೆ ಸೇರಿದ ಪರಿಶಿಷ್ಟ ಜಾತಿ, ವರ್ಗದ ಕೆಲವು ಸಚಿವರು ಮತ್ತು ಶಾಸಕರು, ಶಿವಕುಮಾರ್ ಅವರಿಗೆ ಕಡಿವಾಣ ಹಾಕಲು ಲೋಕಸಭಾ ಚುನಾವಣೆಯನ್ನು ಅಸ್ತ್ರವನ್ನಾಗಿ ಮಾಡಿಕೊಳ್ಳುತ್ತಿ ದ್ದಾರೆನ್ನಲಾಗಿದೆ.

ಚುನಾವಣೆಗೂ ಮುನ್ನ ಜಾತಿಗೊಂದು ಉಪಮುಖ್ಯಮಂತ್ರಿ ಸ್ಥಾನಗಳನ್ನು ನೀಡಬೇಕೆಂದು ಈ ಬಣದ ವರಿಷ್ಠರು ಮುಖ್ಯಮಂತ್ರಿ ಮೇಲೆ ಒತ್ತಡ ಹೇರುತ್ತಿದ್ದಾರೆ. ಪರಿಶಿಷ್ಟ ಜಾತಿ, ವರ್ಗ ಹಾಗೂ ವೀರಶೈವ ಸಮಯದಾಯಕ್ಕೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವುದರಿಂದ ಪಕ್ಷ ಮತ್ತು ಸರ್ಕಾರಕ್ಕೆ ಲಾಭವಾಗುತ್ತದೆಯೇ ಹೊರತು ನಷ್ಟವಿಲ್ಲ ಎಂಬ ವಾದ ಮಂಡಿಸುತ್ತಿದ್ದಾರೆ.

ಪಕ್ಷ ಇಂತಹ ನಿರ್ಧಾರ ಕೈಗೊಳ್ಳುವುದರಿಂದ ಯಾರಿಗೂ ನಷ್ಟವಾಗುವುದಿಲ್ಲ, ಹಿರಿಯರಿಗೆ ಅವಕಾಶ ಮಾಡಿಕೊಟ್ಟರೆ ಗೌರವ ಹೆಚ್ಚುತ್ತದೆ ಮತ್ತು ಚುನಾವಣೆಯಲ್ಲಿ ಪಕ್ಷದ ಮತ ಗಳಿಕೆಯಲ್ಲಿ ಶೇಕಡಾವಾರು ಹೆಚ್ಚಳವಾಗಲಿದೆ ಎನ್ನುತ್ತಿದ್ದಾರೆ. ಅಷ್ಟೇ ಅಲ್ಲ, ಕಳೆದ ಗುರುವಾರ ರಾತ್ರಿ ಸಚಿವ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಈ ಬಣದ ನಾಯಕರು ತೆಗೆದುಕೊಂಡ ತೀರ್ಮಾನಗಳನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ್, ಸಹಕಾರಿ ಸಚಿವ ರಾಜಣ್ಣ, ನಿನ್ನೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸಭೆಯ ಮಾಹಿತಿ ನೀಡಿರುವುದಲ್ಲದೆ, ವರಿಷ್ಠರ ಗಮನಕ್ಕೆ ತಂದು ಹಿರಿಯ ಸಚಿವರಿಗೆ ಬಡ್ತಿ ನೀಡುವಂತೆಯೂ ಕೋರಿದ್ದಾರೆ.

ತಮ್ಮ ಹಕ್ಕೊತ್ತಾಯಕ್ಕೆ ಈ ಬಣ ದೆಹಲಿಗೆ ಬಂದರೆ ಪಕ್ಷದಲ್ಲಿ ಮತ್ತಷ್ಟು ರಾಜಕೀಯ ಗೊಂದಲ ಉಂಟಾಗಲಿರುವುದರಿಂದ ಕೇಂದ್ರದ ವರಿಷ್ಠರು ಸುರ್ಜೇವಾಲ ಅವರನ್ನು ಕಳುಹಿಸುತ್ತಿದ್ದಾರೆ. ಸುರ್ಜೇವಾಲ ಮುಖ್ಯಮಂತ್ರಿ ಬಣ ಹಾಗೂ ವಿರೋಧಿ ಗುಂಪುಗಳ ಅಭಿಪ್ರಾಯಗಳನ್ನೂ ಈ ಸಂದರ್ಭದಲ್ಲಿ ಪಡೆದು ವರಿಷ್ಠರ ಗಮನಕ್ಕೆ ತರಲಿದ್ದಾರೆ.

ಬಣ ರಾಜಕೀಯವನ್ನು ಮೊಳಕೆಯಲ್ಲೇ ಚಿವುಟಿ ಹಾಕುವ ಹಾಗೂ ಲೋಕಸಭಾ ಚುನಾವಣೆಗೆ ಅಭ್ಯರ್ಥಿ ಆಯ್ಕೆಗೆ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು, ಕಳೆದ ಚುನಾವಣೆಯಲ್ಲಿ ಸೋತವರು ಮತ್ತು ಗೆದ್ದವರ ಅಭಿಪ್ರಾಯಗಳನ್ನು ಸುರ್ಜೇವಾಲ ಆಲಿಸಲಿದ್ದಾರೆ. ಕಾರ್ಯಕರ್ತರು ನೀಡುವ ವರದಿ ಹಾಗೂ ರಾಜ್ಯ ಘಟಕ ನೀಡಿರುವ ವರದಿಯನ್ನು ಹೋಲಿಕೆ ಮಾಡಿ ವರಿಷ್ಠರಿಗೆ ಮತ್ತೊಂದು ವರದಿ ನೀಡಲಿದ್ದಾರೆ.

# ಮಹಿಳಾ ಶಿಕ್ಷಣಕ್ಕೆ ಸಾವಿತ್ರಿ ಫುಲೆ ಕೊಡುಗೆ ಅಪಾರ

ದಾವಣಗೆರೆ, ಜ. 6- ಸಾವಿತ್ರಿ ಬಾಯಿ ಫುಲೆ ಅವರು ಮಹಿಳಾ ಶಿಕ್ಷಣಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಸಿದ್ದರು ಎಂದು ಕನ್ನಡ ಶಿಕ್ಷಕಿ ಶ್ರೀಮತಿ ಎಸ್. ಮಂಜುಳಾ ಹೇಳಿದರು.

ತಾಲ್ಲೂಕಿನ ಎಲ್ಲಮ್ಮ ನಗರದ ಉರ್ದು ಶಾಲೆಯಲ್ಲಿ ಜರುಗಿದ ಸಾವಿತ್ರಿಬಾಯಿ ಫುಲೆ ಅವರ ಜಯಂತ್ಯೋತ್ಸವ ಸಮಾರಂಭದಲ್ಲಿ ಸಾವಿತ್ರಿಬಾಯಿ ಫುಲೆ ಅವರ ಚಿಂತನೆಗಳು ಕುರಿತು ಉಪನ್ಯಾಸ ಮಂಡಿಸಿದ ಅವರು, 19ನೇ ಶತಮಾನದ ಭಾರತದ ಪ್ರಸಿದ್ಧ ಸಮಾಜ ಸುಧಾರಕಿಯಾಗಿದ್ದ ಸಾವಿತ್ರಿಬಾಯಿ ಫುಲೆ ಅವರು ಶ್ರೇಷ್ಠ ಲೇಖಕಿ ಸಹ ಹೌದು. ಗರ್ಭಿಣಿ ಮತ್ತು ಶೋಷಿತ ವಿಧವೆಯರ ಸುರಕ್ಷತೆಗಾಗಿ ತಮ್ಮ ಸ್ವಂತ ಮನೆಯಲ್ಲಿ ಶಿಶುಹತ್ಯೆ ತಡೆಗಟ್ಟುವ ಮನೆ ಪ್ರಾರಂಭಿಸಿದರು.

ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿ ವರದಕ್ಷಿಣೆ ಅಥವಾ ಬಹಿರಂಗ ವೆಚ್ಚಗಳಿಲ್ಲದೆ ಮದುವೆಯ ಅಭ್ಯಾಸವನ್ನು ಪ್ರಾರಂಭಿಸಿದ ಭಾರತದ ದಿಟ್ಟ ಮಹಿಳೆ ಅವರಾಗಿದ್ದರು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಉರ್ದು ಕ್ಲಸ್ಟರ್‌ನ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಶಗುಫ್ತ ಯಾಸ್ಮಿನ್ ಮಾತನಾಡಿ, ಭಾರತದಲ್ಲಿ ಸಾಮಾಜಿಕ ವಿಮೋಚನೆಗಾಗಿ ಜಾತ್ಯತೀತ ಶಿಕ್ಷಣಕ್ಕೆ ಅವರು ಒತ್ತು ನೀಡಿದ್ದು, ಅವರ ವ್ಯಕ್ತಿತ್ವದ ಮುಖ್ಯ ಗುರುತು. ಮಹಿಳೆಯರ ಶಿಕ್ಷಣಕ್ಕಾಗಿ ಹಗಲಿರಲು ಶ್ರಮಿಸಿದರು ಎಂದು ಹೇಳಿದರು.



**ಕನ್ನಡ ಶಿಕ್ಷಕಿ ಎಸ್. ಮಂಜುಳಾ ಬಣ್ಣನೆ**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಇಶ್ರತ್ ಸುಲ್ತಾನ ಮಾತನಾಡಿದರು.

ನಿವೃತ್ತ ಶಿಕ್ಷಕರಾದ ಶ್ರೀಮತಿ ಫರಹತ್ ಬಾನು, ಶ್ರೀಮತಿ ನಸ್ರೀನ್ ಬಾನು, ಶ್ರೀಮತಿ ರಿಹಾನ ಕಾತುನ್ ಇವರುಗಳಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಅತಿಕ, ನೂರೈನ್, ಹುಸೇನಾ ಬಾನು, ಆಫ್ರಿನ್ ಬಾನು, ತೆಹರಿನ್, ಸೂಫಿಯಾ ಬಾನು, ನಗ್ಮಾ ಬಾನು, ಶಾಯಿಸ್ತನಾಜ್, ನೂರೈನ್ ವಿದ್ಯಾರ್ಥಿನಿಯರು ಸಾವಿತ್ರಿಬಾಯಿ ಫುಲೆ ಅವರ ವೇಷವನ್ನು ಧರಿಸಿದ್ದರು. ಅಫ್ಜಲ್, ಅಮರ್ ಬೇಗ್, ಜಿಶಾನ್, ವಿದ್ಯಾರ್ಥಿಗಳು ಜ್ಯೋತಿಬಾ ಫುಲೆ ಅವರ ವೇಷಧಾರಿಗಳಾಗಿ ಕಾಣಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಎಸ್. ಮಂಜುಳಾ ಸಾವಿತ್ರಿಬಾಯಿ ಫುಲೆ ಬಗ್ಗೆ ಸ್ವತಃ ಕವನ ಬರೆದು ಹಾಡಿದರು.

ಶ್ರೀಮತಿ ಷಾತಾಜ್ ಬಾನು ಸ್ವಾಗತಿಸಿದರು. ಮದೀಹ ಪ್ರಾರ್ಥಿಸಿದರು. ಶ್ರೀಮತಿ ನಾಜಿಮಾ ಖಾನಂ ವಂದಿಸಿದರು. ಶ್ರೀಮತಿ ಸೈರಾಬಾನು ಮತ್ತು ಶಾಯಿನ್ ಪರ್ವಿನ್ ಉಪಸ್ಥಿತರಿದ್ದರು.

## ಕರ್ತವ್ಯಕ್ಕೆ ಹಾಜರಾಗಿ : ಸಿಎಂ ಮನವಿ

**(1ನೇ ಪುಟದಿಂದ)** ಸರ್ಕಾರ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಅತ್ಯಂತ ಸಹಾನುಭೂತಿಯಿಂದ ಪರಿಗಣಿಸಿದೆ ಎಂದರು.

ಐದು ವರ್ಷಕ್ಕಿಂತ ಕಡಿಮೆ ಸೇವಾನುಭವ ಹೊಂದಿದವರಿಗೆ 5 ಸಾವಿರ ರೂ., 5 ರಿಂದ 10 ವರ್ಷದ ಸೇವಾನುಭವ ಹೊಂದಿದವರಿಗೆ 6 ಸಾವಿರ ರೂ., 10 ರಿಂದ 15 ವರ್ಷದ ಸೇವಾನುಭವ ಹೊಂದಿದವರಿಗೆ 7 ಸಾವಿರ ರೂ. ಹಾಗೂ 15 ವರ್ಷಕ್ಕಿಂತ ಹೆಚ್ಚಿನ ಸೇವಾನುಭವ ಹೊಂದಿದವರಿಗೆ 8 ಸಾವಿರ ರೂ.ಗಳಷ್ಟು ಗೌರವ ಧನ ಹೆಚ್ಚಳ ಮಾಡಲು ಸರ್ಕಾರ ಸಿದ್ಧವಿದೆ.

ಇದರೊಂದಿಗೆ ಅತಿಥಿ ಉಪನ್ಯಾಸಕರ ಆರೋಗ್ಯದ ದೃಷ್ಟಿಯಿಂದ ವಾರ್ಷಿಕ 5 ಲಕ್ಷ ರೂ.ಗಳ ಆರೋಗ್ಯ ವಿಮಾ ಸೌಲಭ್ಯ ಅನುಷ್ಠಾನ, ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, 60 ವರ್ಷ ಮೀರಿದ ನಂತರದಲ್ಲಿ ಭದ್ರತೆ ರೂಪದಲ್ಲಿ ಗರಿಷ್ಠ 5 ಲಕ್ಷ ರೂ. ಇಡುಗಂಟು ನೀಡುವುದು, ವಾರಕ್ಕೆ 15 ಗಂಟೆಗೂ ಹೆಚ್ಚಿನ ಕಾರ್ಯಭಾರ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಒಂದು ದಿನ ವೇತನ ಸಹಿತ ರಜೆ ನೀಡುವುದು ಹಾಗೂ 3 ತಿಂಗಳ ವೇತನ ಸಹಿತ ಮಾತೃತ್ವ ರಜೆ ನೀಡಲು ಮುಖ್ಯಮಂತ್ರಿಗಳು ಒಪ್ಪಿಗೆ ಸೂಚಿಸಿದರು.

ಇದರೊಂದಿಗೆ ನೇಮಕಾತಿಯಲ್ಲಿ ಸೇವಾನುಭವ ಆಧರಿಸಿ, ವೇಟೇಜ್ ನೀಡುವುದು, ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದ ಸ್ಥಳದಲ್ಲಿಯೇ ಕಾರ್ಯಭಾರವಿದ್ದಲ್ಲಿ, ನಂತರದ ವರ್ಷವೂ ಅಲ್ಲಿಯೇ ಅವರ ಸೇವೆಯನ್ನು ಮುಂದುವರೆಸುವುದು ಸೇರಿದಂತೆ ಕೌನ್ಸೆಲಿಂಗ್ ಪ್ರಕ್ರಿಯೆ ಸರಳೀಕರಣಗೊಳಿಸಲು ಸಹ ಸಮ್ಮತಿಸಿ, ಕೂಡಲೇ ಪ್ರತಿಭಟನೆಯನ್ನು ಹಿಂದಕ್ಕೆ ಪಡೆದು ಕರ್ತವ್ಯಕ್ಕೆ ಹಾಜರಾಗುವಂತೆ ಪ್ರತಿಭಟನಾನಿರತ ಅತಿಥಿ ಉಪನ್ಯಾಸಕರಿಗೆ ಮುಖ್ಯಮಂತ್ರಿ ಮನವಿ ಮಾಡಿದರು.

ಏತನ್ಮಧ್ಯೆ ಕರ್ತವ್ಯಕ್ಕೆ ಹಾಜರಾಗಲು ಅತಿಥಿ ಉಪನ್ಯಾಸಕರು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

## ಜ.20ರಿಂದ 'ಆಫ್ ಅಂಡ್ ಆನ್' ಪದ್ಧತಿಯಲ್ಲಿ ನೀರು

**(1ನೇ ಪುಟದಿಂದ)** ತಿಂಗಳವರೆಗೆ ಪ್ರತಿ ತಿಂಗಳು 15 ದಿವಸ ನೀರು ಹರಿಸಬೇಕು. ಕಾಲುವೆಗಳಲ್ಲಿ ಆಂತರಿಕ ಸರದಿ ಇರುವುದರಿಂದ ನೀರು ಎಲ್ಲಾ ರೈತರಿಗೆ ಸಿಗುವಂತಾಗಬೇಕೆಂದು ಒತ್ತಾಯಿಸಿದರು.

ನಾಲೆಗೆ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಕ್ರಮ ಕೈಗೊಳ್ಳುವಂತೆ ಸಚಿವ ಮಧು ಬಂಗಾರಪ್ಪ ಅವರು ದಾವಣಗೆರೆ ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ಅವರಿಗೆ ಸೂಚಿಸಿದರು. ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ್ರು, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್, ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್, ಶಿವಮೊಗ್ಗ ಗ್ರಾಮಾಂತರ ಶಾಸಕರಾದ ಶಾರದಾ ಪೂರ್‍ಯಾನಾಯ್ಕ, ತರೀಕೆರೆ ಶಾಸಕ ಶ್ರೀನಿವಾಸ್, ರೈತ ಸಂಘದ ರಾಜ್ಯಾಧ್ಯಕ್ಷ ಹೆಚ್. ಆರ್. ಬಸವರಾಜಪ್ಪ, ಕೆ.ಟಿ. ಗಂಗಾಧರ್, ಷಣ್ಮುಖಸ್ವಾಮಿ, ದಾವಣಗೆರೆಯ ಬಿ. ನಾಗೇಶ್ವರರಾವ್, ಹೆಚ್.ಆರ್. ಲಿಂಗರಾಜ್ ಶಾಮನೂರು, ಭದ್ರಾ ಆಡಳಿತಾಧಿಕಾರಿ ಮುರುಳಿ, ಶಿವಮೊಗ್ಗ ಜಿಲ್ಲಾಧಿಕಾರಿ ಸೆಲ್ವಕುಮಾರ್, ಭದ್ರಾ ಮುಖ್ಯ ಇಂಜಿನಿಯರ್ ಶಿವಾನಂದ ಬಣಕಾರ್, ಇಇ ಗಳಾದ ಬಸವರಾಜ್, ಮಂಜುನಾಥ್, ಎಇಇ ಧನಂಜಯ್ ಮತ್ತಿತರರು ಸಭೆಯಲ್ಲಿದ್ದರು.

## ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಕರೆ

**(1ನೇ ಪುಟದಿಂದ)** ಮಾತನಾಡಿ, ಕ್ರೀಡೆಗಳ ಮೂಲಕ ಮಹಿಳೆಯರ ಸಬಲೀಕರಣಕ್ಕಾಗಿ ಖೇಲೋ ಇಂಡಿಯಾ ಅಡಿಯಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸುತ್ತಿದ್ದು, ಮಹಿಳೆಯರು ಹಿಂಜರಿಕೆ ಇಲ್ಲದೇ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ಎಂದು ಸಲಹೆ ನೀಡಿದರು.

ಪಾಲಿಕೆ ಆಯುಕ್ತೆ ರೇಣುಕಾ ಮಾತನಾಡಿ, ನಾನು ಸಹ ಶಾಲಾ-ಕಾಲೇಜು ದಿನಗಳಲ್ಲಿ ಉತ್ತಮ ಕ್ರೀಡಾಪಟು ಆಗಿದ್ದು, ಇಂದು ಈ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವ ಮೂಲಕ ಹಳೆ ದಿನಗಳು ನೆನಪಿಗೆ ಬರುತ್ತಿವೆ ಎಂದರು.

ಜಿಲ್ಲಾ ಪುಟ್ಬಾಲ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಎಸ್.ಎಸ್. ಮಲ್ಲಿಕಾರ್ಜುನ್ ಅವರು 20 ವರ್ಷಗಳ ಹಿಂದೆ ಕ್ರೀಡಾ ಸಚಿವರಾಗಿದ್ದ ವೇಳೆ ಕ್ರೀಡೆಗಳಿಗೆ ನೀಡಿದ್ದ ಪ್ರೋತ್ಸಾಹ ಇನ್ನು ಜನಮಾನಸದಲ್ಲಿ ಉಳಿದಿದೆ. ಇಂದಿಗೂ ಸಹ ಪ್ರತಿಯೊಂದು ಕ್ರೀಡಾಕೂಟಕ್ಕೂ ಅವರು ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಇಓ ಶ್ರೀಮತಿ ಪುಷ್ಪಲತಾ, ಮಾಜಿ ಮೇಯರ್ ಅನಿತಾಬಾಯಿ ಮಾಲತೇಶ್, ವನಿತಾ ಸಮಾಜದ ಅಧ್ಯಕ್ಷರಾದ ಪದ್ಮಾ ಪ್ರಕಾಶ್, ಲತಿಕಾ ದಿನೇಶ್ ಶೆಟ್ಟಿ, ಸುಷ್ಮಾ ಪಾಟೀಲ್, ಜಿಲ್ಲಾ ಪುಟ್ಬಾಲ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಅಲ್ಲಾವಲ್ಲಿ ಮುಜಾಹಿದ್ ಖಾನ್, ಮಹಮ್ಮದ್ ರಫೀಕ್, ಎಸ್.ಕೆ.ಚಂದ್ರಶೇಖರ್, ಅಶ್ರಫ್ ಅಲಿ, ಮುಸ್ತಾಫ, ಡಿ.ಎಸ್.ಅಲ್ಲಾಭಕ್ಷಿ, ಖಲೀಲ್ ಖಾಜಿ, ಡೇವಿಡ್ ಪ್ರಸನ್ನ, ರಂಗನಾಥ, ನವಜೀತ್ ಬಂಗಾರು, ಅಶೋಕ್, ಸೈಯದ್ ಖಾಲಿದ್, ಅಹ್ಮದ್ ಮುಜ್ತಾಬ್, ಜಾನ್ ಫರ್ನಾಂಡೀಸ್, ಜೆ..ಜೆ.ಮೈನುದ್ದೀನ್, ಅಬ್ದುಲ್ ರಬ್ಬಾನಿ ಮತ್ತಿತರರಿದ್ದರು.

## ಯುವನಿಧಿ ಸಹಾಯವಾಣಿ ಕೇಂದ್ರ ಆರಂಭ

**(1ನೇ ಪುಟದಿಂದ)** sevasindhugs.karnataka.gov.in/" \t "_blank" https://sevasindhugs.karnataka.gov.in ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಹಾಯವಾಣಿ ಸಂ: 6364638504, ರಾಜ್ಯ ಸಹಾಯವಾಣಿ ಸಂ: 18005999918 ಗೆ ಸಂಪರ್ಕಿಸಬಹುದೆಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್.ಎಂ.ವಿ ತಿಳಿಸಿದ್ದಾರೆ.

**ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,**
SINCE 1962 DAVANAGERE URBAN CO-OPERATIVE BANK LTD.
**ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.**

**ಸದಸ್ಯರ ಗಮನಕ್ಕೆ**

- ಬ್ಯಾಂಕಿನ ಉಪನಿಯಮದನ್ವಯ ಬ್ಯಾಂಕಿನ ಸದಸ್ಯರು ಕನಿಷ್ಠ ಷೇರು ಮೊತ್ತ ರೂ. 1000/- ಹೊಂದಿರತಕ್ಕದ್ದು, ಇಲ್ಲವಾದಲ್ಲಿ ಮುಂಬರುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡುವ ಅರ್ಹತೆ ಇರುವುದಿಲ್ಲ. ಆದ್ದರಿಂದ ಭಾಗಶಃ ಷೇರು ಮೊತ್ತ ಹೊಂದಿರುವ ಮಾನ್ಯ ಸದಸ್ಯರುಗಳು ದಿನಾಂಕ 20.01.2024ರ ಕಛೇರಿ ಸಮಯದೊಳಗಾಗಿ ಪ್ರಧಾನ ಕಛೇರಿಗೆ ಭೇಟಿ ನೀಡಿ ಷೇರು ಮೊತ್ತವನ್ನು ರೂ. 1000/-ಗಳಿಗೆ ಸರಿ ಮಾಡಿಕೊಳ್ಳುವುದು.
- ಚುನಾವಣೆಯಲ್ಲಿ ಮತ ಚಲಾಯಿಸಲು ಕಡ್ಡಾಯವಾಗಿ ಸದಸ್ಯರ ಗುರುತಿನ ಚೀಟಿ ತರಬೇಕಾಗಿದ್ದು ಗುರುತಿನ ಚೀಟಿ ಇಲ್ಲದ ಸದಸ್ಯರು ಕಛೇರಿ ಸಮಯದಲ್ಲಿ ಪ್ರಧಾನ ಕಛೇರಿಗೆ ಭೇಟಿ ನೀಡಿ ಗುರುತಿನ ಚೀಟಿ ಪಡೆಯಬಹುದಾಗಿದೆ.
- ಬ್ಯಾಂಕಿನ ಸದಸ್ಯರಿಗೆ ಕಳುಹಿಸುವ ವಾರ್ಷಿಕ ವರದಿಗಳು ಹಾಗೂ ಪತ್ರಗಳು ವಿಳಾಸ ಬದಲಾಗಿದೆ ಎಂಬ ಕಾರಣಕ್ಕೆ ವಾಪಾಸ್ ಬಂದಿರುತ್ತವೆ. ಆದ್ದರಿಂದ ಸದಸ್ಯರು ತಮ್ಮ ವಿಳಾಸ ಬದಲಾದಲ್ಲಿ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಆಡಳಿತ ಕಛೇರಿಗೆ ಬಂದು ಸಂಬಂಧಿಸಿದ ದಾಖಲೆಗಳನ್ನು ನೀಡಿ ಷೇರು ಖಾತೆಯಲ್ಲಿ ವಿಳಾಸ ಬದಲಾಯಿಸಿಕೊಳ್ಳಲು ಕೋರಿದೆ.
- ಮಾನ್ಯ ಸದಸ್ಯರು ತಮ್ಮ ಷೇರು ಖಾತೆಯಲ್ಲಿ ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐ.ಡಿಯನ್ನು ನೋಂದಾಯಿಸಿಕೊಳ್ಳಲು ಕೋರಿದೆ.
- ಡಿವಿಡೆಂಡ್ ಪಡೆಯಲು ಖಾತೆ ಹೊಂದುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಸದಸ್ಯರು ಉಳಿತಾಯ ಖಾತೆಯನ್ನು ತೆರೆಯುವುದು ಹಾಗೂ ಡಿವಿಡೆಂಡ್ ಪಡೆಯದೇ ಇರುವ ಸದಸ್ಯರು ಕೂಡಲೇ ಆಡಳಿತ ಕಛೇರಿಗೆ ಬಂದು ತಮ್ಮ ಡಿವಿಡೆಂಡ್ ಪಡೆಯುವುದು. ಇಲ್ಲವಾದಲ್ಲಿ 3 ವರ್ಷದ ನಂತರ ಬ್ಯಾಂಕಿನ ಉಪನಿಧಿ ಪ್ರಕಾರ ಅಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು.
- ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನದ ಪ್ರಕಾರ ಸದಸ್ಯರು/ ಖಾತೆದಾರರು ತಮ್ಮ ಇತ್ತೀಚಿನ ಕೆ.ವೈ.ಸಿ. ದಾಖಲೆಗಳ ನಕಲು ಪ್ರತಿಯನ್ನು ಬ್ಯಾಂಕಿಗೆ ಸಲ್ಲಿಸಿ ಖಾತೆಯನ್ನು ಸರಿಪಡಿಸಿಕೊಳ್ಳುವುದು.

| ಶ್ರೀ ಕೊಗುಂಡಿ ಬಕ್ಕೇಶಪ್ಪ | ಶ್ರೀ ಅಂದನೂರು ಮುಪ್ಪಣ್ಣ | ಶ್ರೀ ಬಿ.ಎಸ್. ಮಲ್ಲೇಶ್ |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಧಾನ ವ್ಯವಸ್ಥಾಪಕರು |

# ಶ್ರೀಕಾಂತ್ ಪೂಜಾರಿ ವಂಚನೆ : ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್‌ನಿಂದ ಪ್ರತಿಭಟನೆ



ದಾವಣಗೆರೆ, ಜ. 6 - ರಾಮಭಕ್ತನ ಹೆಸರಿನಲ್ಲಿ ಸಮಾಜ ಘಾತುಕ ಕೆಲಸ ಮಾಡಲಾಗುತ್ತಿದೆ ಎಂಬ ಆರೋಪ ಹೊತ್ತಿರುವ ಹುಬ್ಬಳ್ಳಿಯ ಶ್ರೀಕಾಂತ್ ಪೂಜಾರಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ, ಜಿಲ್ಲಾ ಕಾಂಗ್ರೆಸ್‌ನ ಪ್ರಮುಖರು ಬಡಾವಣೆ ಪೊಲೀಸ್ ಠಾಣೆ ಮುಂಭಾಗ ಇಂದು ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು.

ಬಿಜೆಪಿಗರು ಮಾಡಿರುವ ಭ್ರಷ್ಟಾಚಾರದ ಫಲಕಗಳನ್ನು ಹಿಡಿದು ನಮ್ಮನ್ನು ಬಂಧಿಸಿ ಎಂದು ಬಿಜೆಪಿ ನಾಯಕರನ್ನು ಕುಟುಕಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಶ್ರೀಕಾಂತ ಪೂಜಾರಿ ಅವರು ತಮ್ಮ ಅಪರಾಧ ಕೃತ್ಯಗಳಿಂದ ರಕ್ಷಣೆ ಸಿಗಲಿ ಎಂಬ ಕಾರಣಕ್ಕೆ ಧರ್ಮ ರಕ್ಷಣೆ ನಾಟಕವಾಡುತ್ತಿದ್ದಾರೆ. ಇಂಥವರನ್ನು ಬಂಧಿಸದೆ ರಾಜಾ ರೋಷವಾಗಿ ತಿರುಗಾಡಲು ಬಿಟ್ಟರೆ ಶ್ರೀರಾಮಚಂದ್ರನೂ ಕ್ಷಮಿಸಲಾರ ಎಂದರು.

16 ಸಮಾಜ ಘಾತುಕ ಕೃತ್ಯಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ವ್ಯಕ್ತಿಯ ಪರವಾಗಿ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ನಾಯಕರು ಈತನ ಎಲ್ಲಾ ಅಪರಾಧ ಕೃತ್ಯಗಳಿಗೆ ತಮ್ಮ ಪಕ್ಷದ ಬೆಂಬಲವಿದೆ ಎಂಬುದನ್ನು ಬಹಿರಂಗವಾಗಿ ಹೇಳಲಿ ಅಥವಾ ಪ್ರತಿಭಟನೆ ಕೈಬಿಟ್ಟು ಸಾರ್ವಜನಿಕವಾಗಿ ಕ್ಷಮೆ ಕೋರಲಿ ಎಂದು ಆಗ್ರಹಿಸಿದರು.

ಅಪರಾಧ ಕೃತ್ಯಗಳಲ್ಲಿ ತೊಡಗುವವರು ಧರ್ಮ ರಕ್ಷಕರು ಎಂದು ಹೇಳಿಕೊಂಡು ಕೊಲೆ, ಸುಲಿಗೆಗಳಿಗೆ ಇಳಿದರೆ ಅದನ್ನೂ ಬಿಜೆಪಿ ನಾಯಕರು ಬೆಂಬಲಿಸುತ್ತಾರೆಯೇ? ರಾಮಮಂದಿರದ ಉದ್ಘಾಟನೆ ವೇಳೆ ಶ್ರೀಕಾಂತ ಪೂಜಾರಿಯ ಬಂಧನವಾಗಿರುವುದು ಕಾಕತಾಳೀಯ ಅಷ್ಟೆ. ಹಳೆಯ ಪ್ರಕರಣಗಳನ್ನು ಪರಿಶೀಲನೆ ನಡೆಸುವ ವೇಳೆ ಪೊಲೀಸರು ಇತರೆ 36 ಜನರ ಜೊತೆಗೆ ಇವರನ್ನು ಕೂಡ ಬಂಧಿಸಿದ್ದಾರೆ. ಇದರಲ್ಲಿ ಪ್ರತೀಕಾರವೂ ಇಲ್ಲ, ತುಷ್ಟೀಕರಣವೂ ಇಲ್ಲ. ಕಾನೂನು ಪಾಲನೆ ಮಾಡಬೇಕು, ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ. ಜಿ. ಶಿವಕುಮಾರ್, ಅಯೂಬ್, ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಲ್.ಹೆಚ್. ಸಾಗರ್, ಶ್ರೀಕಾಂತ್ ಬಂಗೇರ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್, ದ್ರಾಕ್ಷಾಯಣಮ್ಮ, ರಾಜೇಶ್ವರಿ ಮತ್ತಿತರರಿದ್ದರು.

## ನಾಳೆ ಕನ್ಸಲ್ಟೆಂಟ್ ಅಭಿಯಂತರರ ಸಭೆ

ದಾವಣಗೆರೆ, ಜ. 6- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಿಗೆಗಳನ್ನು ಪ್ರಸ್ತುತ ಎಲ್‌ಬಿಪಿಎಎಸ್ ಆನ್‌ಲೈನ್ ತಂತ್ರಾಂಶದಲ್ಲಿ (ನಿರ್ಮಾಣ-2.0) ಪಾಲಿಕೆಯಲ್ಲಿ ನೋಂದಾಯಿತ ಕನ್ಸಲ್ಟೆನ್ಸಿ ಅಭಿಯಂತರರು ಆನ್‌ಲೈನ್‌ನಲ್ಲಿ ಸಲ್ಲಿಸುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ವಿಲೇವಾರಿ ಮಾಡಲಾಗುತ್ತಿದೆ.

ಕಟ್ಟಡ ಪರವಾನಿಗೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಹಾಗೂ ಅನುಮೋದಿತ ಮಹಾ ಯೋಜನೆಯ ವಲಯ ನಿಯಮಾಗಳಿಗಳನ್ನು ಅರ್ಥೈಸಿಕೊಂಡು ಕಟ್ಟಡ ಪರವಾನಿಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡುವಲ್ಲಿ ಇರುವ ತೊಡಕುಗಳು, ಸಮಸ್ಯೆಗಳ ಬಗ್ಗೆ ಚರ್ಚಿಸಲು ಕನ್ಸಲ್ಟೆಂಟ್ ಅಭಿಯಂತರರುಗಳ ಸಭೆಯನ್ನು ಮಹಾನಗರ ಪಾಲಿಕೆ ಕೌನ್ಸಿಲ್ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 8 ರ ಸೋಮವಾರ ಸಂಜೆ 5 ಗಂಟೆಗೆ ಕರೆಯಲಾಗಿದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

## ಭೋಳಚಟ್ಟಿ ಚೌಡೇಶ್ವರಿ ಕಾರ್ತಿಕೋತ್ಸವ

ದಾವಣಗೆರೆ, ಜ.6- ನಗರದ ರುದ್ರ ಭೂಮಿ ಪುಣ್ಯಕ್ಷೇತ್ರದಲ್ಲಿರುವ ಭೋಳ ಚಟ್ಟಿ ಶ್ರೀ ಚೌಡೇಶ್ವರಿ ದೇವಿಯ ಕಾರ್ತಿಕೋತ್ಸವವನ್ನು ಇದೇ ದಿನಾಂಕ 9 ರ ಮಂಗಳವಾರ ರಾತ್ರಿ 8 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯದರ್ಶಿ ಕೆ. ಸಂತೋಷ್‌ಕುಮಾರ್ ಕೆ. ತಿಳಿಸಿದ್ದಾರೆ.

# ಮಕ್ಕಳು ಗೊತ್ತಿಲ್ಲದಿರುವುದನ್ನು ಪ್ರಶ್ನಿಸಿ ಉತ್ತರ ಪಡೆಯುವುದನ್ನು ಕಲಿತುಕೊಳ್ಳಬೇಕು

## ಗೋಣಿವಾಡದ ಸೋಮೇಶ್ವರ ವಸತಿ ಶಾಲೆಯಲ್ಲಿ ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ



ದಾವಣಗೆರೆ, ಜ. 6- ಮಕ್ಕಳು ಗೊತ್ತಿಲ್ಲದೇ ಇರುವುದನ್ನು ಪ್ರಶ್ನಿಸಿ ಉತ್ತರ ಪಡೆಯುವುದನ್ನು ಕಲಿತುಕೊಳ್ಳಬೇಕು, ನಾನು ಪ್ರಶ್ನಿಸಿಯೇ ಇಲ್ಲಿವರೆಗೆ ಬಂದಿದ್ದೇನೆ ಎಂದು ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಹೇಳಿದರು.

ನಗರದ ಹೊರವಲಯದ ಗೋಣಿವಾಡದ ಸೋಮೇಶ್ವರ ವಸತಿ ಶಾಲೆಯಲ್ಲಿ ಶುಕ್ರವಾರ ಸಂಜೆ ನಡೆದ ಸೋಮೇಶ್ವರೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.


ಡಾ. ರಾಜ್‌ಕುಮಾರ್ ಅವರಿಂದ ಕಂಠೀರವ ಸ್ಟುಡಿಯೋದಲ್ಲಿ ಹಾಡನ್ನು ಹೇಳಿಸಿದ ಕೀರ್ತಿ ನನಗಿದೆ. 1985ರಲ್ಲಿ ಮೈಸೂರಿನ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದ ಸಂಚಾಲಕರಾಗಿ ನಾನು ಮತ್ತು ಚಿತ್ರನಟ ದಿ.ಶಂಕರ್ ನಾಗ್ ಕಾರ್ಯನಿರ್ವಹಿಸಿರುವ ಹೆಮ್ಮೆ ಇನ್ನೂ ಹಸಿರಾಗಿದೆ. 70 ಜನ ದಲಿತ ಕಲಾವಿದರನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗಿ, 3 ಜನ ದಲಿತ ಕವಿಗಳಿಗೆ ಪದ್ಮಶ್ರೀ ಪ್ರಶಸ್ತಿ ಕೊಡಿಸಿದೆ. ಹಂಪಿ ಉತ್ಸವದಲ್ಲಿ ಮೇದಾರ ಜಾತಿಯವರಿಂದ ಚಪ್ಪರ ಹಾಕಿಸಿದ್ದನ್ನು ಕೀಳಿಸಿದರು, ಆದರೂ ಬಿಡದೇ ಬೆಟ್ಟ ಗುಡ್ಡಗಳಿಗೆ ಲೈಂಟಿಂಗ್ ಹಾಕಿ ಹಂಪಿ ಉತ್ಸವವನ್ನು ನೆರವೇರಿಸಿದೆನು ಎಂದು ತಮ್ಮ ಬದುಕಿನ ಕೆಲ ಘಟನೆಗಳನ್ನು ನೆನೆದರು.


ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಕಣ್ವಕುಪ್ಪೆ ಮಠದ ಶ್ರೀ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಭಾರತ ದೇಶ ವಿಶ್ವಕ್ಕೆ ಗುರುವಾಗಿ ಬೆಳೆದಿದೆ. ಇಲ್ಲಿನ ಸಾಂಸ್ಕೃತಿಕ ಪರಂಪರೆ ಅನುಗ್ರಹಿಸಿದ ಕೀರ್ತಿ ಶರಣರಿಗೆ, ತಪಸ್ವಿಗಳಿಗೆ ಸಲ್ಲುತ್ತದೆ. ನಾವುಗಳು ಶ್ರೇಷ್ಠ, ಪುಣ್ಯದ ಕೆಲಸ ಮಾಡಿದ್ದರ ಫಲವಾಗಿ ಮನುಷ್ಯರಾಗಿ ಜನಿಸಿದ್ದೇವೆ. ಹಾಗಾಗಿ ಪುಣ್ಯ ಕೆಲಸಗಳನ್ನು ಮಾಡುತ್ತಾ ಜೀವನ ಸಾಗಿಸಬೇಕು. ಆಗ ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ಬಗೆಹರಿಸುವಂತಹ ಭಗವಂತನ ಕಾರುಣ್ಯ ಇರುತ್ತದೆ ಎಂದರು.

ನಿವೃತ್ತ ಸೇನಾಧಿಕಾರಿಯೂ ಆಗಿರುವ ವೈದ್ಯ ಡಾ. ಹಾಲೇಶ್, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಡಿಡಿಪಿಐ ಜಿ. ಕೊಟ್ರೇಶ್, ಸರ್‌ಎಂವಿ ಕಾಲೇಜು ಕಾರ್ಯದರ್ಶಿ ಶ್ರೀಧರ್, ಶಾಲೆ ಕಾರ್ಯದರ್ಶಿ ಕೆ.ಎಂ. ಸುರೇಶ್, ಅಧ್ಯಕ್ಷ ಅಶೋಕ್ ರೆಡ್ಡಿ, ಪ್ರಾಚಾರ್ಯ ವೀಣಾ ಸುರೇಶ್ ಇತರರು ಇದ್ದರು.

ವಾಲ್ಮೀಕಿ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ. ವೀರಣ್ಣ ಮತ್ತು ಪತ್ನಿ ಲಕ್ಷ್ಮಿದೇವಿ, ಕುಕ್ಕುವಾಡ ಆಂಜನೇಯ ಸೌಹಾರ್ದ ಸಂಘದ ಅಧ್ಯಕ್ಷ ರುದ್ರೇಗೌಡರಿಗೆ ಸೋಮೇಶ್ವರ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ನಗರದಲ್ಲಿ 12ರಿಂದ ಹೆಬ್ಬಾಳು ಶ್ರೀ ಮಹಾರುದ್ರ ಸ್ವಾಮಿಗಳವರ ಪುರಾಣ





ದಾವಣಗೆರೆ, ಜ. 6 - ಹೆಬ್ಬಾಳು ವಿರಕ್ತಮಠದ ಶ್ರೀ ಗುರು ಶಿವಯೋಗಿ ಮಹಾರುದ್ರ ಮಹಾಸ್ವಾಮಿಗಳವರ ಪುರಾಣ - ಪ್ರವಚನವು ಇದೇ ದಿನಾಂಕ 12 ರಿಂದ ಒಂದು ತಿಂಗಳ ಪರ್ಯಂತ ಪ್ರತಿದಿನ ಸಂಜೆ 6.30 ಗಂಟೆಗೆ ನಗರದ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ.

ಪ್ರತಿವರ್ಷದಂತೆ ಈ ವರ್ಷವೂ ಪುರಾಣ - ಪ್ರವಚನವನ್ನು ಏರ್ಪಡಿಸಲಾಗಿದ್ದು, ಪಂಡಿತ ಶ್ರೀ ಪುಟ್ಟರಾಜ ಕವಿ ಗವಾಯಿಯವರ ಶಿಷ್ಯರಾದ ಕಲ್ಬುರ್ಗಿ ಸಂಸ್ಥಾನ ಹಿರೇಮಠದ ಶ್ರೀ ಬಂಡಯ್ಯ ಶಾಸ್ತ್ರಿಗಳು ಪ್ರವಚನವನ್ನು ನಡೆಸಿಕೊಡಲಿದ್ದಾರೆ. ಈ ವರ್ಷ 48ನೇ ವರ್ಷದ ಪ್ರವಚನವಾಗಿದೆ.

ಶ್ರೀ ಶಿವಯೋಗೀಶ್ವರ ಭಜನಾ ಸಂಘದ ಆಶ್ರಯದಲ್ಲಿ ಪುರಾಣ ಪ್ರಚವನ ಆಯೋಜನೆಗೊಂಡಿದ್ದು, ಸದ್ಭಕ್ತರು ಪ್ರಚವನದಲ್ಲಿ ಭಾಗವಹಿಸುವಂತೆ ಸಂಚಾಲಕರಾದ ಅಜ್ಜಂಪುರ ಶೆಟ್ರು ಮೃತ್ಯುಂಜಯ, ರುದ್ರೇಶ್ ಮತ್ತು ಸಿ.ಕೆ. ಬಸವರಾಜಪ್ಪ ಕೋರಿದ್ದಾರೆ.

## ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ 9ಕ್ಕೆ ಕಡೇ ಕಾರ್ತಿಕ



ದಾವಣಗೆರೆ, ಜ. 6 - ನಗರದ ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಇದೇ ದಿನಾಂಕ 9ರ ಮಂಗಳವಾರ ಶ್ರೀ ಕಾಳಿಕಾ ದೇವಿಯ ಕಡೇಕಾರ್ತಿಕೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಂದು ಬೆಳಿಗ್ಗೆ ಪ್ರಾತಃ ಕಾಲದಲ್ಲಿ ಶ್ರೀ ಅಮ್ಮನವರಿಗೆ ವೇದೋಕ್ತ ಪಂಚಾಮೃತ ಅಭಿಷೇಕ, ವಿಶ್ವಕರ್ಮ ಅಷ್ಟೋತ್ತರ ಪೂಜೆ, ಪುಷ್ಪಾಲಂಕಾರ, ವಿಶೇಷ ಪೂಜಾ ಅಲಂಕಾರ, ಮಹಾಮಂಗಳಾರತಿ, ರಾತ್ರಿ 8 ಗಂಟೆಗೆ ದೀಪಾರಾಧನೆ, ಕಾರ್ತಿಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.



## ಶಾಮನೂರಿನಲ್ಲಿ ಇಂದು ವರ ಬೀರಲಿಂಗೇಶ್ವರ ದೇವರ ಕಾರ್ತಿಕೋತ್ಸವ

ಶಾಮನೂರಿನ ಶಿರಮಗೊಂಡನಹಳ್ಳಿ ರಸ್ತೆಯ ಶಿವ-ಪಾರ್ವತಿ ಬಡಾವಣೆಯಲ್ಲಿರುವ ಶ್ರೀ ವರ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 7.30ಕ್ಕೆ ಕಾರ್ತಿಕೋತ್ಸವ ನಡೆಯಲಿದೆ.

## ಖನಿಜ, ರೇಷ್ಮೆ ಇಲಾಖೆ ಸಭೆ ನಡೆಸಿದ ಮುಖ್ಯಮಂತ್ರಿ



ಬೆಂಗಳೂರು, ಜ. 6 - ಸಿಎಂ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ರೇಷ್ಮೆ ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಸಭೆಯು ಇಂದು ವಿಧಾನಸೌಧದಲ್ಲಿ ನಡೆಯಿತು. ರಾಜ್ಯ ಖನಿಜ ನಿಗಮ ನಿಯಮಿತ ಮತ್ತು ರೇಷ್ಮೆ ಇಲಾಖೆಯ ಸಹಯೋಗದೊಂದಿಗೆ ಸರ್ಕಾರಿ ಮತ್ತು ಖಾಸಗಿ ವಾಹನಗಳ ಸಹಭಾಗಿತ್ವದಲ್ಲಿ (ಪಿಪಿಪಿ) ಕೈಗೊಳ್ಳಲು ಉದ್ದೇಶಿಸಿರುವ ಕಟ್ಟಡದ ನಿರ್ಮಾಣ ಕುರಿತಂತೆ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ತುರ್ತಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಖಾತೆ ಸಚಿವ ಶಾಮನೂರು ಮಲ್ಲಿಕಾರ್ಜುನ್, ಸಚಿವರುಗಳಾದ ಡಾ.ಎಂ.ಪಿ.ಸುಧಾಕರ್, ಡಾ. ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಸರ್ಕಾರ ಕಾರ್ಯದರ್ಶಿಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಹೊನ್ನಾಳಿ : ಪಾಠ ನಡೆದಿಲ್ಲವೆಂದು ಪರೀಕ್ಷೆ ಬಹಿಷ್ಕರಿಸಿದ ಪದವಿ ವಿದ್ಯಾರ್ಥಿಗಳು



ಹೊನ್ನಾಳಿ, ಜ.6- ಸರ್ಕಾರಿ ಪದವಿ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಬಿ.ಕಾಂ ಪರೀಕ್ಷೆಯಲ್ಲಿ ಇಂದು ನಡೆಯಬೇಕಿದ್ದ ಫೈನಾನ್ಸಿಯಲ್ ಎಜುಕೇಶನ್ ಅಂಡ್ ಇನ್ವೆಸ್ಟ್‌ಮೆಂಟ್ ಅವೇರ್ನೆಸ್ ವಿಷಯದ ಪರೀಕ್ಷೆಯ ಬಹಿಷ್ಕರಿಸಿದ ಘಟನೆ ನಡೆದಿದೆ.

ದ್ವಿತೀಯ ಬಿ.ಕಾಮ್ ನಲ್ಲಿ 98 ವಿದ್ಯಾರ್ಥಿಗಳಿದ್ದು, ಇಂದು ವಿಷಯಕ್ಕೆ ಸಂಬಂಧಿಸಿದ ಸೆಕೆಂಡ್ ಸೆಮ್ ಪರೀಕ್ಷೆ ನಡೆಯಬೇಕಿತ್ತು. ವಿಷಯಕ್ಕೆ ಸಂಬಂಧಿಸಿದ ಉಪನ್ಯಾಸಕರು ಸರಿಯಾಗಿ ತರಗತಿಯನ್ನು ತೆಗೆದುಕೊಳ್ಳದೇ ಇರುವುದರಿಂದ ಫಸ್ಟ್ ಸೆಮ್ ಪರೀಕ್ಷೆಯು ಬರೆದಿಲ್ಲ ಎಂದು ಸ್ಪಷ್ಟಪಡಿಸಿರುವರು.

ಇಂದಿನ ದ್ವಿತೀಯ ಸೆಮ್ ಅನ್ನು ವಿರೋಧಿಸಿ ಪರೀಕ್ಷೆ ಬರೆಯುವುದಿಲ್ಲವೆಂದು ಪರೀಕ್ಷೆಯ ಅವಧಿಯಲ್ಲೇ ಕಾಲೇಜು ಮುಂದೆ ತಮ್ಮ ಅಸಮಾಧಾನವನ್ನು ವಿದ್ಯಾರ್ಥಿಗಳು ಜನತಾವಾಣಿ ಪತ್ರಿಕೆಯ ಮೂಲಕ ವ್ಯಕ್ತಪಡಿಸಿರುವರು.

ನಂತರದ ಸಮಯದಲ್ಲೇ ಕೆಲವರು ಮಾತ್ರ ಪರೀಕ್ಷೆಯಲ್ಲಿ ತಮಗೆ ತಿಳಿದಿರುವುದನ್ನು ಬರೆದರೆ, ಕೆಲ ವಿದ್ಯಾರ್ಥಿಗಳು ಅರ್ಥವಾಗದೆ ಇರುವ ಪಶ್ನೆಗಳಿಗೆ ಖಾಲಿ ಉತ್ತರ ಪತ್ರಿಕೆ ನೀಡಿದ್ದಾರೆಂದು ತಿಳಿದುಬಂದಿದೆ.

ಈ ವಿಷಯಕ್ಕೆ ಸಂಬಂಧಿಸಿದ ಉಪನ್ಯಾಸಕರಿಂದ ಘಟನೆಗೆ ಕಾರಣ ಹಾಗು ಪರೀಕ್ಷೆಯಲ್ಲಿ ಬರೆದ ಹಾಗು ಬರಿಯದೇ ಇರುವ ವಿದ್ಯಾರ್ಥಿಗಳ ವಿವರ ತಿಳಿದುಬರಬೇಕಿದೆ !

## ವರಿಷ್ಠರ ತೀರ್ಮಾನವೇ ಅಂತಿಮ : ಗೃಹ ಸಚಿವ ಪರಮೇಶ್ವರ್ ಸ್ಪಷ್ಟನೆ

ಬೆಂಗಳೂರು, ಜ. 6- ಮೂವರು ಉಪಮುಖ್ಯಮಂತ್ರಿ ನೇಮಕ ಸಂಬಂಧ ವರಿಷ್ಠರ ತೀರ್ಮಾನವೇ ಅಂತಿಮ ಎಂದು ಗೃಹ ಸಚಿವ ಡಾ. ಈ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮ ಸಹೋದ್ಯೋಗಿ ಸತೀಶ ಜಾರಕಿಹೊಳಿ ನಿವಾಸದಲ್ಲಿ ಊಟಕ್ಕೆ ಸೇರಿದ್ದೆವು, ಅಲ್ಲಿ ರಾಜಕೀಯ ವಿಚಾರ ಚರ್ಚೆ ಆಗಿದೆ, ಆದರೆ ಉಪಮುಖ್ಯಮಂತ್ರಿ ಬಗ್ಗೆ ಚರ್ಚೆ ನಡೆದಿಲ್ಲ ಎಂದರು.

ಸಚಿವ ರಾಜಣ್ಣ ನೀಡಿರುವ ಹೇಳಿಕೆ ಅವರ ವೈಯಕ್ತಿಕವಾದದ್ದು, ಅವರ ದೃಷ್ಟಿಯಿಂದ ಒಳ್ಳೆಯದಿರಬಹುದು, ಪಕ್ಷ ಸಂಘಟನೆ ಮತ್ತು ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಇಂತಹ ಹೇಳಿಕೆ ನೀಡಿರಬಹುದು ಎಂದರು. ಆಡಳಿತ ಮತ್ತು ಪಕ್ಷದ ವಿಚಾರಗಳಿಗೆ ಸಚಿವರುಗಳು ಪ್ರತ್ಯೇಕವಾಗಿ ದೆಹಲಿಗೆ ಹೋಗುತ್ತಾರೆ, ಆ ಸಂದರ್ಭದಲ್ಲಿ ವರಿಷ್ಠರನ್ನು ಭೇಟಿ ಮಾಡಿ ಬರುತ್ತಾರೆ ಇದರಲ್ಲಿ ತಪ್ಪೇನಿದೆ ಎಂದರು.

## ನಗರದಲ್ಲಿ ಇಂದು ಸಂಗೀತ ಸಿರಿ ರಸಮಂಜರಿ



ಸಂಗೀತ ಸಿರಿ ತನ್ನ 26ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಇಂದು ಸಂಗೀತ ರಸ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಹೋಟೆಲ್ ಶಾಂತಿ ಪಾರ್ಕ್ ಸಭಾಂಗಣದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸಿರ್ಸಿಯ ಗಾಯಕಿ ವೈಶಾಲಿ ಮಂಜ್ರೇಕರ್, ಬಿ.ಎಂ. ರಿಯಾಜ್ ಅಹಮ್ಮದ್ ಸೇರಿದಂತೆ ಡಾ.ಅನೀಸ್, ಡಾ. ರಾಘವನ್, ಕು ಶಿಲ್ಪಾ, ಸೇರಿದಂತೆ ಸ್ಥಳೀಯ ಕಲಾವಿದರು ಹಾಡಿ ರಂಜಿಸಲಿದ್ದಾರೆ. ಸಂಗೀತ ಸಿರಿ ಸಂಗೀತ ನಿರ್ಮಾಪಕರಾದ ಶ್ರೀಮತಿ ಸಕೀನಾ ಅವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

## ಹದಡಿ : ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ, ಮುಳ್ಳು ಗದ್ದಿಗೆ



ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ ಮತ್ತು ಮುಳ್ಳುಗದ್ದಿಗೆ ಜಾತ್ರೆ ಹಾಗೂ ಕೆಂಡದಾರ್ಚನೆ ಮಹೋತ್ಸವ ಮತ್ತು ಮಹಾಸ್ವಾಮಿಯ ಜಾತ್ರೋತ್ಸವವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ರಾತ್ರಿ 8.30 ಕ್ಕೆ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕದಲಿ ಕಾರ್ತಿಕೋತ್ಸವ, ದೀಪಾರಾಧನೆ, ಶ್ರೀ ಬೀರಲಿಂಗೇಶ್ವರ ದೇವರ ಪವಾಡದ ಪದ ಮತ್ತು ವೀರಗಾರರ ನೃತ್ಯದೊಂದಿಗೆ ರಾತ್ರಿ 8.30 ಕ್ಕೆ ನಡೆಯುವುದು.

ನಾಳೆ ಸೋಮವಾರ ಶಸ್ತ್ರ ಪವಾಡಗಳು, ಬೀರಲಿಂಗೇಶ್ವರ ಸ್ವಾಮಿಗೆ ಎಡೆ ಸಮರ್ಪಣೆ, ಮಹಾಮಂಗಳಾರತಿ, ಜವಳ ದೀಡ ನಮಸ್ಕಾರ, ಉರುಳು ಸೇವೆ ಜರುಗುವುದು. ನಾಡಿದ್ದು ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಕೆಂಡದ ಗದ್ದುಗೆಗೆ ಜ್ಯೋತಿ, ಮೆರವಣಿಗೆ, ಕೆಂಡದ ಗದ್ದಿಗೆಗೆ ಜ್ಯೋತಿ ಹಚ್ಚುವುದು, ಮಧ್ಯಾಹ್ನ 2 ಗಂಟೆಗೆ ಶ್ರೀ ಬೀರಲಿಂಗೇಶ್ವರ ದೇವರು, ಶ್ರೀ ಆಂಜನೇಯಸ್ವಾಮಿ ದೇವರು, ಶ್ರೀ ದಂಡಿ ದುರುಗಮ್ಮ ದೇವಿ, ಶ್ರೀ ಮಸಿಯಾಂಬಿಕಾದೇವಿ, ಶ್ರೀ ಹೊರಟ್ಟಿ ದುರುಗಮ್ಮ ದೇವಿ ದೇವರುಗಳು ಹೊಳೆ ಪೂಜೆ ಮಾಡಿ, ಹಲಗೆ, ಡೊಳ್ಳುಗಳ ಮೆರವಣಿಗೆ, ಪೂಜೆ ನಡೆದು, ಮಧ್ಯಾಹ್ನ 3 ಗಂಟೆಗೆ ಹೊರಟ್ಟಿ ದುಗ್ಗಮ್ಮ, ಮಸಿಯಮ್ಮ, ಆಂಜನೇಯಸ್ವಾಮಿ, ದಂಡಿ ದುರುಗಮ್ಮ ದೇವರುಗಳೊಂದಿಗೆ ಬೀರಲಿಂಗೇಶ್ವರರು ಮುಳ್ಳು ಗದ್ದಿಗೆ ಏರಿ ಮೆರವಣಿಗೆ ನಡೆಯುವುದು.

## ಎಲ್ಲಾ ಮನೆಗಳಲ್ಲಿ ದೀಪ ಬೆಳಗಲು ಮನವಿ



ದಾವಣಗೆರೆ, ಜ. 6 - ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ಇದೇ ದಿನಾಂಕ 22ರಂದು ಉದ್ಘಾಟನೆಗೊಳ್ಳಲಿದ್ದು, ಇದರ ಪ್ರಯುಕ್ತ ನಗರದ 18ನೇ ವಾರ್ಡಿನ ಪ್ರತಿ ಮನೆ - ಮನೆಗಳಿಗೆ ತೆರಳಿ ಅಯೋಧ್ಯೆಯಿಂದ ಬಂದಿರುವ ಮಂತ್ರಾಕ್ಷತೆ, ಕರ ಪತ್ರ ಹಾಗೂ ಭಾವಚಿತ್ರವನ್ನು ಕೊಟ್ಟು, ಇದೇ ದಿನಾಂಕ 22ರಂದು ಸಂಜೆ ಮನೆಗಳಲ್ಲಿ ಕನಿಷ್ಠ ಐದು ದೀಪಗಳನ್ನು ಬೆಳಗಿಸಿ ದೀಪಾವಳಿ ಆಚರಣೆ ಮಾಡುವಂತೆ ವಿನಂತಿಸಲಾಯಿತು.

ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ವಕೀಲರಾದ ಎ. ಸಿ. ರಾಘವೇಂದ್ರ, ಗೋಪಾಲ್ ಶೆಟ್ಟಿ, ರಮೇಶ್ ರಾಯ್ಕರ್, ಸೋಗಿ ಗುರುಶಾಂತ್, ಸಂದೀಪ್ ಜೈನ್, ವೈಬಿಎಸ್ ಶೆಟ್ರು, ಸುನೀಲ್, ಕೀರ್ತಿ ಜನಾರ್ಧನ್ ಶೇಟ್, ಮಂಜುಳಾ, ಗೀತಾ, ಪುಷ್ಪ ಲತಾ ಮತ್ತು ಇತರರು ಇದ್ದರು.

# ಕಳುವಾದ ಮೊಬೈಲ್‌ಗಳು ವಾರಸುದಾರರ ವಶಕ್ಕೆ



ದಾವಣಗೆರೆ, ಜ. 6 - ಜಿಲ್ಲಾ ಪೊಲೀಸ್ ಕಛೇರಿಯಲ್ಲಿಂದು ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅಧ್ಯಕ್ಷತೆಯಲ್ಲಿ ಸಿಇಐಆರ್ ಪೋರ್ಟಲ್ ಮೂಲಕ ಪತ್ತೆಯಾದ ಮೊಬೈಲ್‌ಗಳನ್ನು ವಾರಸುದಾರರಿಗೆ ಹಿಂದಿರುಗಿಸುವ ಕಾರ್ಯಕ್ರಮ ನಡೆಯಿತು.

ಜಿಲ್ಲಾ ವ್ಯಾಪ್ತಿಯಲ್ಲಿ ಕಳುವಾದ / ಕಳೆದು ಹೋದ ಮೊಬೈಲ್ ಫೋನ್‌ಗಳನ್ನು ಸಿಇಐಆರ್ ಪೋರ್ಟಲ್‌ನಲ್ಲಿ ಮೊಬೈಲ್ ವಾರಸುದಾರರ ವಿವರಗಳನ್ನು ನಮೂದು ಮಾಡಿ ಮೊಬೈಲ್ ನಂಬರ್ ಬ್ಲಾಕ್ ಮಾಡುವ ಮುಖಾಂತರ ಕಳೆದುಹೋದ ಮೊಬೈಲ್‌ಗಳ ಪೈಕಿ 206 ಮೊಬೈಲ್‌ಗಳನ್ನು ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಪತ್ತೆ ಮಾಡಿದ್ದು, ಇಂದು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಐಪಿಎಸ್ ರವರು ಮೊಬೈಲ್ ವಾರಸುದಾರರಿಗೆ ಹಿಂದಿರುಗಿಸಿದರು. ಪತ್ತೆಯಾದ ಮೊಬೈಲ್‌ಗಳ ಅಂದಾಜು ಮೊತ್ತ 25,00,000/-ರೂಗಳು ಆಗಿರುತ್ತದೆ.

2023 ರ ಸಾಲಿನಲ್ಲಿ ಕಳುವಾದ / ಕಳೆದು ಹೋದ ಮೊಬೈಲ್ ಫೋನ್‌ಗಳನ್ನು ಸಿಐಇಆರ್ ಪೋರ್ಟಲ್ ನಲ್ಲಿ ಮೊಬೈಲ್ ವಾರಸುದಾರರ ವಿವರಗಳನ್ನು ನಮೂದು ಮಾಡಿ ಮೊಬೈಲ್ ನಂಬರ್ ಮೂಲಕ ಒಟ್ಟು 3880 ಮೊಬೈಲ್‌ಗಳನ್ನು ಬ್ಲಾಕ್ ಮಾಡಲಾಗಿದ್ದು, ಅದರಲ್ಲಿ 880 ಮೊಬೈಲ್‌ಗಳನ್ನು ಮೊಬೈಲ್ ವಾರಸುದಾರರಿಗೆ ಹಿಂದಿರುಗಿಸಲಾಗಿರುತ್ತದೆ.

ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಕಳುವಾದ / ಕಳೆದು ಹೋದ ಮೊಬೈಲ್ ಫೋನ್‌ಗಳನ್ನು ವಾರಸುದಾರರು ಕೆಎಸ್‌ಪಿ ಮೊಬೈಲ್ ಆ್ಯಪ್ ಮೂಲಕ ದೂರು ದಾಖಲಿಸಿ, ದೂರಿನ ಸ್ವೀಕೃತಿ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು, ನಂತರ 'CEIR' web portal (https://www.ceir.gov.in) ಗೆ ಬೇಟಿ ನೀಡಿ ಮೊಬೈಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡ ದೂರಿನ ಸ್ವೀಕೃತಿ ಪ್ರತಿ ಹಾಗೂ ಆಧಾರ್ / ಇತರೆ ಗುರುತಿನ ಚೀಟಿಯನ್ನು ಅಪ್‌ಲೋಡ್ ಮಾಡಿ ಮೊಬೈಲ್ ಬ್ಲಾಕ್ ಮಾಡುವ ವಿಧಾನವನ್ನು ತಿಳಿಸಲಾಗಿರುತ್ತದೆ.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರು-2 ಆದ ಜಿ. ಮಂಜುನಾಥ, ಸಿಇಎನ್ ಪೊಲೀಸ್ ನಿರೀಕ್ಷಕರಾದ ಪಿ. ಪ್ರಸಾದ್ ಮತ್ತು ಇತರರು ಉಪಸ್ಥಿತರಿದ್ದರು.

ಸಾರ್ವಜನಿಕರು ತಮ್ಮ ಮೊಬೈಲ್ ಕಳುವಾದಲ್ಲಿ/ ಸುಲಿಗೆಯಾಗಿದ್ದಲ್ಲಿ/ ಕಾಣೆಯಾಗಿದ್ದಲ್ಲಿ ಕೂಡಲೇ ನೂತನ #CEIR ವೆಬ್ ಪೋರ್ಟಲ್‌ಗೆ ಭೇಟಿ ನೀಡಿ ನೋಂದಾಯಿಸಲು ಹಾಗೂ ಇದರ ಸದುಪಯೋಗ ಪಡೆಯಲು ತಿಳಿಸಲಾಗಿದೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್ ರಾಜ್, ಡಾ. ಸಿ.ಎನ್.ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸು ವರು. ವಿವರಕ್ಕೆ ಸಂಪರ್ಕಿಸಿ : 63631 51534.

## ವಾಲ್ಮೀಕಿ ಜಾತ್ರೆ; 9ರಂದು ಸಭೆ

ಹರಿಹರ, ಜ. 6- ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರು ಪೀಠದ ಆವರಣದಲ್ಲಿ ಫೆಬ್ರವರಿ 8 ಮತ್ತು 9 ರಂದು ನಡೆಯುವ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರೆಯ ಪ್ರಯುಕ್ತ ಇದೇ ದಿ. 9 ರಂದು ಮಂಗಳವಾರ ಬೆಳಗ್ಗೆ 11 ಗಂಟೆಗೆ ಶ್ರೀಮಠದ ಸಭಾ ಭವನದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.


KJS ಸುವರ್ಣಾವಕಾಶ

ನಗರ/ಗ್ರಾಮೀಣ ಪ್ರದೇಶದ ಪದವೀಧರ ಯುವಕ-ಯುವತಿಯರಿಗೆ ಕುಮಾರ ಜ್ಯೂಯಲರ್ಸ್‌ನಲ್ಲಿ ಕೆಲಸ ಮಾಡಲು ಸುವರ್ಣಾವಕಾಶ. ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಸಕ್ತರು ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.

ಕುಮಾರ ಜ್ಯೂಯಲರ್ಸ್
ಮಂಡಿಪೇಟೆ, ದಾವಣಗೆರೆ.
7536 916 916, 99640 88991

ಶ್ರೀ ಹಲ್ಲುಮನೆ ಸೌಹಾರ್ದ ಸಹಕಾರ ಲಿ.
# 173/16, ಕಾಲೇಜ್ ರಸ್ತೆ, ನಿಟುವಳ್ಳಿ, ದಾವಣಗೆರೆ-4.
ದೂರವಾಣಿ ಸಂಖ್ಯೆ : 08192 260019

ಅಧಿಸೂಚನೆ :

ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

| | | | |
|---|---|---|---|
| 01) | ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (ಬ್ಯಾಂಕಿಂಗ್ & ಆಡಳಿತ ಕ್ಷೇತ್ರದಲ್ಲಿ 5 ವರ್ಷಗಳ ಅನುಭವ) | ಹುದ್ದೆಗಳು - 01 | BE., MBA, M.Com., |
| 02) | ಮ್ಯಾನೇಜರ್ (ನಿವೃತ್ತ ಬ್ಯಾಂಕ್ ಮ್ಯಾನೇಜರ್) | ಹುದ್ದೆಗಳು - 02 | B.com., BBM., MBA., |
| 03) | ಅಭಿವೃದ್ಧಿ ಅಧಿಕಾರಿಗಳು (ಬ್ಯಾಂಕಿಂಗ್) | ಹುದ್ದೆಗಳು - 10 | SSLC, PUC, Degree |
| 04) | ಮಾರ್ಕೆಟಿಂಗ್ ಆಫೀಸರ್ (ಪೈಪ್ ಡಿವಿಜನ್) | ಹುದ್ದೆಗಳು - 05 | Degree |

ಸ್ವಂತ ವಾಹನವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ. ಅರ್ಜಿ ಸಲ್ಲಿಸುವ ವಿಧಾನ

email ID : hullumanesouhardha@gmail.com

ಆಡಳಿತ ಮಂಡಳಿ

## ಸದ್ಗುರು ಬ್ರಹ್ಮ ಚೈತನ್ಯ ಮಹಾರಾಜರ ಆರಾಧನಾ ಮಹೋತ್ಸವ : ಪಲ್ಲಕ್ಕಿ ಉತ್ಸವ



ದಾವಣಗೆರೆ, ಜ. 6- ಇಲ್ಲಿನ ಶ್ರೀ ಸದ್ಗುರು ಬ್ರಹ್ಮ ಚೈತನ್ಯ ಮಹಾರಾಜರ ಆರಾಧನಾ ಮಹೋತ್ಸವದ ಅಂಗವಾಗಿ ಮಂದಿರದಿಂದ ಪಲ್ಲಕ್ಕಿ ಉತ್ಸವ ಪ್ರಾರಂಭಗೊಂಡು ನಗರದ ರಾಜಬೀದಿಗಳಲ್ಲಿ ಸಂಚರಿಸಿ ಮುಕ್ತಾಯಗೊಂಡಿತು.

ಮಹಿಳೆಯರಿಂದ ಭಜನೆ ಮತ್ತು ನೃತ್ಯದ ಮೂಲಕ ಅದ್ಧೂರಿಯಾಗಿ ಪಲ್ಲಕ್ಕಿ ಉತ್ಸವವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಮಂದಿರದ ಅಧ್ಯಕ್ಷ ಪಿ.ಸಿ. ಮಹಾಬಲೇಶ್ವರ್, ಕಾರ್ಯದರ್ಶಿ ಸುಬ್ರಮಣ್ಯ ಬಿ., ಅಚ್ಯುತ ಮೂರ್ತಿ, ಜಯಪ್ರಕಾಶ್ ಕೊಲ್ಲೂರ್ ಬಾಬಣ್ಣ, ವಿಜೇಶ್ ಕೊಲ್ಲೂರ್, ಪ್ರಣವ್ ಬೀಜಾನ್, ಮಹೇಶ್ ಪಿ.ವಿ., ಪಿ.ಎಲ್. ಶಂಕರ್ ರಾವ್, ವೆಂಕಟೇಶ್ ಕೆ.ಎಸ್., ಪ್ರಭಾಕರ್ ಕೊಲ್ಲೂರು, ಶ್ರೀಮತಿ ಸುಮಾ ಕೆ.ಎಸ್., ಹೇಮಾ ಶಂಕರ್, ಸುನಿತಾ ರಾವ್, ಶ್ರೀಮತಿ ಶುಭ ವಸಂತ್ ಮತ್ತು ಇತರರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

## ಪಥ ಸಂಚಲನಕ್ಕೆ ರುಚಿತಾ, ಹ್ಯಾಂಡ್‌ಬಾಲ್ ಪಂದ್ಯಕ್ಕೆ ರಂಜಿತಾ





ಚಿತ್ರದುರ್ಗ, ಜ.6- ಇಲ್ಲಿನ ಎಸ್.ಜೆ.ಎಂ. ಕಲಾ ಮತ್ತು ವಾಣಿಜ್ಯ ವಿದ್ಯಾಲಯದಲ್ಲಿ ದ್ವಿತೀಯ ಬಿ.ಎ. ವಿದ್ಯಾರ್ಥಿನಿಯರಾದ ಎನ್.ಎಸ್.ಎಸ್. ಸ್ವಯಂ ಸೇವಕಿ ಕು. ರುಚಿತಾ ಎಲ್. ಅವರು ಇದೇ ದಿನಾಂಕ 26 ರಂದು ಬೆಂಗಳೂರಿನಲ್ಲಿ ನಡೆಯುವ ಕರ್ನಾಟಕ ರಾಜ್ಯ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆಯಾಗಿದ್ದಾರೆ.

ದ್ವಿತೀಯ ಬಿ.ಕಾಂ. ವಿದ್ಯಾರ್ಥಿನಿ ಕು. ರಂಜಿತಾ ಎಂ. ಅವರು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ ವಿಶ್ವವಿದ್ಯಾಲಯದ ಹ್ಯಾಂಡ್‌ಬಾಲ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

## ನಗರದಲ್ಲಿ ಇಂದು ಶ್ರೀಕ್ಷೇತ್ರ ಶಿಬಾರ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಕಾರ್ತಿಕ

ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಕ್ಷೇತ್ರ ಶಿಬಾರ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿ ಕಡೇ ಕಾರ್ತಿಕೋತ್ಸವ ಕಾರ್ಯಕ್ರಮವನ್ನು ಇಂದು ಸಂಜೆ 7.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿ ಗೋಪಾಲರಾವ್ ಸಾವಂತ್ ತಿಳಿಸಿದ್ದಾರೆ.

## ವಾಹನಗಳ ಸುರಕ್ಷಿತ ನೋಂದಣಿ ಫಲಕ ಅಳವಡಿಸಲು ಅವಧಿ ವಿಸ್ತರಣೆ

ದಾವಣಗೆರೆ, ಜ.6- 1ನೇ ಏಪ್ರಿಲ್ 2019 ಕ್ಕಿಂತ ಮೊದಲು ನೋಂದಾಯಿಸಲ್ಪಟ್ಟ ಎಲ್ಲಾ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳು, ಲಘು ಮೋಟಾರು ವಾಹನಗಳು, ಪ್ರಯಾಣಿಕ ಕಾರುಗಳು, ಮಧ್ಯಮ ಮತ್ತು ಭಾರೀ ವಾಣಿಜ್ಯ ವಾಹನಗಳು, ಟ್ರೈಲರ್, ಟ್ರಾಕ್ಟರ್ ಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಹೆಚ್‌ಎಸ್‌ಆರ್‌ಪಿ) ಅಳವಡಿಸುವುದು ಕಡ್ಡಾಯವಾಗಿದೆ.

ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ದಿನಾಂಕ 17-02-2023 ರವರೆಗೆ ಅವಧಿ ವಿಸ್ತರಿಸಲಾಗಿರುತ್ತದೆ. ಸಾರ್ವಜನಿಕರು ಆನ್ ಲೈನ್ ಮೂಲಕ ಹೆಚ್.ಎಸ್.ಆರ್.ಪಿ. ಪಡೆಯಲು ತೊಂದರೆಗಳಾದಲ್ಲಿ ಕೆಳಕಂಡ ದೂರವಾಣಿ ಸಂಖ್ಯೆಗಳ ಮೂಲಕ ಸಹಾಯವಾಣಿ ಸಂಪರ್ಕಿಸಬಹುದು. (94498 63429, 94498 63426) ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.


ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ ದಿ ವೆಡ್ಡಿಂಗ್ ಮಾಲ್....

ಚಾಮರಾಜ ಪೇಟೆ. ದಾವಣಗೆರೆ. 9686195327



UDAYSHIVAKUMAR INFRA LTD.

Banashankari Badavane, Behind Swamy Vivekanand School, Near NH-4 Bypass, Davangere

APPOINTMENTS

1) Accounts Officer: B.Com/M.com with more than 5 years' experience in company accounting, knowledge of Tally ERP9 prime, TDS & GST–CA Inter is preferable.

2) Accountant: B.Com with minimum 3 years' experience in accounting, knowledge of Tally ERP9 prime, TDS & GST.

Please send your resume to email: udayshivakumar.infra@gmail.com

Mob: 9071999952, 9008047207


## ನಗರದಲ್ಲಿ ನಾಳೆ ಶ್ರೀ ಜೆಹ್ವೇಶ್ವರ ಸ್ವಾಮಿ ಕಾರ್ತಿಕ



ದಾವಣಗೆರೆ, ಜ. 6- ನಗರದ ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ರಸ್ತೆ)ದ ಬಳಿಯ ಸ್ವಕುಳಸಾಳಿ ಸಮಾಜದ ಶ್ರೀ ಜಿಹ್ವೇಶ್ವರ ಧ್ಯಾನ ಮಂದಿರದಲ್ಲಿ ಸ್ವಕುಳಸಾಳಿ ಸಮಾಜದ ಮಹಿಳಾ ಮಂಡಳಿ ವತಿಯಿಂದ ನಾಡಿದ್ದು ದಿನಾಂಕ 8ರ ಸೋಮವಾರ ಸಂಜೆ 5.30ಕ್ಕೆ ಶ್ರೀ ಜಿಹ್ವೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಸುಜಾತ ರೋಖಡೆ ತಿಳಿಸಿದ್ದಾರೆ.

## ಕಕ್ಕರಗೊಳ್ಳದಲ್ಲಿ ಇಂದು

ಕೆರೆ ಏರಿ ಶ್ರೀ ಭರಮ ದೇವರ ದೇವಸ್ಥಾನ ಸಮಿತಿ ವತಿಯಿಂದ ಇಂದು ವಿಶೇಷ ಪೂಜೆ, ಅಭಿಷೇಕ, ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ. ಬೆಳಿಗ್ಗೆ 6 ಗಂಟೆಗೆ ಮಹಾ ಅಭಿಷೇಕ, ಬೆಳಿಗ್ಗೆ 11 ರಿಂದ 4 ರವರೆಗೆ ಪ್ರಸಾದ, ಸಂಜೆ 7 ಗಂಟೆಗೆ ದೀಪೋತ್ಸವ ಜರುಗಲಿದೆ.


GM HALAMMA PU COLLEGE, DAVANAGERE

ADMISSION CUM SCHOLARSHIP TEST

Offline Test on 07-01-2024 (Sunday)

Time: 11.00 AM to 12.30 PM & 03.00 PM to 04.30 PM

First Top 10 Students Get 80% Scholarship

Above 90% Students Get 50% Scholarship

Exam Pattern: MCQ
40 Marks for Science
40 Marks for Maths
20 Marks for English

Venue: GM Halamma PU College, GMIT Campus, P.B.Road, Davangere. M: 91411 58731, 91411 58732



ಪ್ರಥಮ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಸಿಟಿ ಕಾಯಿಪೇಟೆ ವಾಸಿ

ಶ್ರೀ ಸೋಗಿ ವೀರಣ್ಣ ಗೌಡರು ಮಾಡುವ ವಿಜ್ಞಾಪನೆಗಳು.

ನನ್ನ ಧರ್ಮಪತ್ನಿಯಾದ

ಶ್ರೀಮತಿ ಸೋಗಿ ಗಂಗಮ್ಮ

ಅವರ

ಪ್ರಥಮ ವರ್ಷದ ಪುಣ್ಯಸ್ಮರಣೆಯನ್ನು

ದಿನಾಂಕ 07.01.2024ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ.

ಸ್ಥಳ : ನಾಮದೇವ ಸಿಂಪಿ ಕಲ್ಯಾಣ ಮಂಟಪ ದೊಡ್ಡಪೇಟೆ, ದಾವಣಗೆರೆ.

ದುಃಖತಪ್ತರು

ಶ್ರೀ ಸೋಗಿ ವೀರಣ್ಣ ಗೌಡರು ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಸೋಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.

ಮೊ : 9900129198, 9945588567 095353 93111



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ



ಶ್ರೀಮತಿ ಚೌಕಿಪೇಟೆ ಗಂಗಮ್ಮ ವೀರಭದ್ರಪ್ಪ ದಾವಣಗೆರೆ

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 03.01.2024ನೇ ಬುಧವಾರ ಮಧ್ಯಾಹ್ನ 12.45ಕ್ಕೆ ನಮ್ಮ ಜ್ಯೇಷ್ಠ ಪುತ್ರನಾದ

ಶ್ರೀ ಸಿ.ಪಿ. ರಾಜಶೇಖರಪ್ಪ (ಪ್ಯಾಟಿ ರಾಜಣ್ಣ)

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ : 07.01.2024ನೇ ಭಾನುವಾರ ಮಧ್ಯಾಹ್ನ 12.30ಕ್ಕೆ ನಮ್ಮ ಸ್ವಗೃಹ, ಕೆ.ಬಿ. ಬಡಾವಣೆ, ಕೆನರಾ ಬ್ಯಾಂಕ್ ರಸ್ತೆ, ಹಳೇ ಪೋಸ್ಟ್ ಆಫೀಸ್ ಹಿಂಭಾಗ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಚೌಕಿಪೇಟೆ ವಂಶಸ್ಥರು ಹಾಗೂ ಬಂಧು-ಮಿತ್ರರು

ಫೋ. : 81054 20816, 74839 86656

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಿ.ಬಿ.ಎಸ್.ಇ. ದಾವಣಗೆರೆ.

RASHTROTTHANA VIDYA KENDRA CBSE

Affiliation No: 830511, DAVANAGERE: 577004

Ph : 08192-258255, Mob: 9480766501, 9964182067, Email: rvkdvgacademics@gmail.com

2024-25ನೇ ಸಾಲಿನ ಪ್ರಿ-ಕೆಜಿ ಯಿಂದ 10ನೇ ತರಗತಿಗಳಿಗೆ ನೋಂದಣಿ ಪ್ರಾರಂಭ




Infrastructure and Facilities
- Spacious well ventilated class rooms
- Well Stocked Library
- Well Equipped Montessori, Science Lab
- Mathematics, Language & Digital Class rooms
- Yoga, Dance, Music, Art & Craft
- Highly Qualified Experienced Faculty

Combinations : PCMB / PCMCs

Registration open for I PUC & II PUC

Intergrated courses for IPUC & II PUC with NEET/JEE/KCET

Hostel facility for both Boys & Girls

Achievements
- Consecutively 100% result in Grade 10 AISSE for 8 academic Years.
- Represented Karnataka In National Level CBSE Yoga Championship 2023-24.
- Represented State 4 times in National Level National Children Science Congress.
- Represented District 6 times in state level National Children Science Congress.
- Received 3 times District Young Scientist Award
- Received 1 Time State Young Scientist Award
- More than 30 plus students nominated by Govt. for Inspire awards in a decade.
- Two students have cracked NTSE till final Level.
- And grabbed 100 plus prizes in Inter-school competitions

Scan me for Registration



Walk-In Interview

On 14-01-2024, Sunday. 9:00 am to 4:00pm

Applications are invited for the post of teaching staff for the above institution for the Academic year 2024-25

| Designation | Vacancy |
|---|---|
| Vice Principal | 03 |
| Administrator | 02 |
| Head Mistress for Pre-Primary | 02 |
| Lecturer : Phy, Che, Maths, Bio, Eng, Kan, Hin | 02 (For Each Subject) |
| TGT: Kan, Eng, Hin, Maths, Sci, SS. | 04 (For Each Subject) |
| PRT: Kan, Eng, Hin, Maths, Sci, SS. | 05 (For Each Subject) |
| NTT- for Preprimary | 08 |
| IT- Instructor | 04 |
| Physical Education Teacher | 04 |
| Communicative Samskrutha Teacher | 02 |
| Drawing Teacher | 03 |
| Vocalist | 02 |
| Instrument Teacher-Keyboard & Tabala | 02 |
| Classical Dance Teacher | 02 |
| Librarian | 03 |
| Yoga Instructor | 02 |
| Accountant & Front Office Manager | 02 (For Each Post) |
| Supervisor | 02 |

Qualified, Trained Faculties with Experience in a Reputed Institution are Required for the Academic Year for over 7 Schools like RVK Davanagere, RVK H.B. Halli,RVK Sattur, RVK Kalburgi, RVK Ballari, RVK Kerur, RVK Davanagere.

The candidate applying for the Lecturers should be an experienced Qualification as per State Norms. Proficiency in English & Computer is must for All Teaching Posts. Salary No Constraint for Deserving Candidates. Aspirants are informed to send the Resume to the Respective School ID on or Before 10-01-2024 and also expected to carry hard copy of Resume during Interview.Candidates will be given phone call regarding the interview Venue.

M: 94807 66501, 99641 82067

RASHTROTTHANA VIDYALAYA (State Curriculum)

Opp ESI Hospital, Nittuvalli, Davanagere.

Contact No: 08192-258244, 95356 94249



RASHTROTTHANA COMPOSITE PU COLLEGE

Opp ESI Hospital, Nittuvalli, Davanagere.

College Code: Gd0436 M: 99028-49981, 87926-27879



RASHTROTTHANA GOKULAM

SS Hi-Tech Hospital Road, Lakshmi Layout, Near Saibaba Mandir, Davanagere-57705.

Contact No: 7760617929, 8861363963, E-Mail: gokulamrvk@gmail.com

Registration Open

For the Grades Pre-Kg, LKG & UKG 2024-25

